# ಪುಂಗವ

ರಾಷ್ಟ್ರೀಯ ಜಾಗರಣ ಪತ್ರಿಕೆ

ಪಾಕ್ಷಿಕ

ಸಂಪುಟ : 39 | ಸಂಚಿಕೆ : 24 | ವಿಳಂಬಿ–ಆಷಾಢ | ಕಲಿಯುಗಾಬ್ದ 5120 | 01–08–2018 | ತ್ರೈವಾರ್ಷಿಕ : ರೂ. 150.00 | ಬಿಡಿ ಪ್ರತಿ : ರೂ. 3.00 | ಪುಟಗಳು : 4




ಇತ್ತೀಚೆಗೆ ಫಿನ್‌ಲ್ಯಾಂಡಿನಲ್ಲಿ ನಡೆದ ವಿಶ್ವ ಕಿರಿಯರ ಅಥ್ಲೆಟಿಕ್ಸ್ ಪಂದ್ಯಾಟದಲ್ಲಿ ಚಿನ್ನದ ಪದಕ ಗೆದ್ದ ಮೊದಲ ಭಾರತೀಯ ಓಟಗಾರ್ತಿ ಹಿಮಾ ದಾಸ್.

# 'ಹಿಮಾ'ಲಯದೆತ್ತರಕ್ಕೆ ಭಾರತದ ಓಟ

ಅಸ್ಸಾಂ ಕಂಧೂಲಿಮಾರಿ ಗ್ರಾಮ. ಅಪ್ಪಯ್ಯನ ಗದ್ದೆಯೊಳಗೆ ಹರಕಲು ಶೂ ಪೇರಿಸಿಕೊಂಡು ಅಕ್ಕಪಕ್ಕದ ಹುಡುಗರ ಜೊತೆ ಫುಟ್‌ಬಾಲ್ ಆಟವಾಡುತ್ತಿದ್ದ ಎರಡು ಜಡೆಯ ಪೋರಿಗೆ ಪಿಟಿ ಮೇಷ್ಟ್ರು ಕರೆದು ಅಥ್ಲಿಟಿಕ್ಸ್ ಬಗ್ಗೆಯೂ ಗಮನಹರಿಸುವಂತೆ ಸೂಚಿಸಿದ್ದರು. ಫುಟ್‌ಬಾಲ್‌ನಲ್ಲೇ ಮುಂದಿನ ಪಯಣವೆಂದು ಅಂದುಕೊಡಿದ್ದವಳಿಗೆ ಓಟ ಸ್ಪರ್ಧೆಯಲ್ಲಿ ಬಹುಮಾನ ಬಂದಿತ್ತು. ಪಿಟಿ ಮಾಸ್ಟರ್ ಶಂಸುಲ್ ಹೋಕ್ ಆ ಪೋರಿಯನ್ನ ನಾಗಾ ಸ್ಪೋರ್ಟ್ಸ್ ಅಸೋಸಿಯೇಷನ್ನಿನ ಗೌರಿಶಂಕರ್ ರಾಯ್ ಅವರಿಗೆ ಪರಿಚಯಿಸಿದರು. ಅಲ್ಲಿಂದ ಮುಂದೆ ಅಂತರ್ ಜಿಲ್ಲಾ ಮಟ್ಟದಲ್ಲಿ ಚಿನ್ನ ಬಾಚಿಕೊಂಡ ಹುಡುಗಿ 2018 ರ ವರ್ಲ್ಡ್ ಅಂಡರ್ 20 ಚಾಂಪಯನ್‌ಶಿಪ್‌ನ ತನಕ ತಿರುಗಿ ನೋಡಲೇ ಇಲ್ಲ. ಮುಂದಿನದ್ದು ಇತಿಹಾಸದ ಪುಟಗಳಲ್ಲಿ ದಾಖಲಿಸಿದಂತಹ ಘಟನಾವಳಿ. ಭಾರತದ ಹೆಸರನ್ನು ಸ್ವರ್ಣ ಪದಕಗಳ ಸಾಲಿಗೆ ಅಂಟಿಸಿದವಳು, ಹೌದು ಈಕೆ ಬೇರಾರೂ ಅಲ್ಲ, ಇಡೀ ರಾಷ್ಟ್ರದ ಮನಗೆದ್ದ ಹರಿಣದಂತಹ ಹುಡುಗಿ 'ಹಿಮಾದಾಸ್'.

ಅಂತರ್ ಜಿಲ್ಲಾ ಮಟ್ಟದಲ್ಲೇ ಯುವಜನ ಮತ್ತು ಕ್ರೀಡಾ ಇಲಾಖೆಯ ನಿರ್ದೇಶನಾಲಯದ ಕೋಚ್ ನಿಪೋನ್ ದಾಸ್‌ರವರ ಕಣ್ಣಿಗೆ ಬಿದ್ದ ಹಿಮಾಳನ್ನು ಮುಂದಿನ ತರಬೇತಿಗಾಗಿ ಗವಾಹಟಿಗೆ ಬರುವಂತೆ ಆಹ್ವಾನಿಸಲಾಯಿತು, ಮೊದಲಿಗೆ ಬಾಕ್ಸಿಂಗ್ ಮತ್ತು ಫುಟ್‌ಬಾಲ್ ಮಾತ್ರವಿದ್ದ ಅಕಾಡೆಮಿಯಲ್ಲಿ ಅಥ್ಲೇಟಿಕ್ಸ್ ವಿಭಾಗವನ್ನೂ ಆರಂಭಿಸಲಾಯಿತು. ಆರಂಭದಲ್ಲಿ ವಿರೋಧಿಸಿದರೂ ನಂತರ ಅಳುಕಿನಿಂದಲೇ ತಂದೆತಾಯಿಯರು ಕಳುಹಿಸಿಕೊಟ್ಟಿದ್ದರು.

**ಈಕೆ ಪದಕ ಪಡೆದದ್ದು ಸಂಭ್ರಮವಾದರೆ ಇನ್ನು ಪದಕ ನೀಡುವ ಸಂದರ್ಭದಲ್ಲಿ ರಾಷ್ಟ್ರಗೀತೆ ಮೊಳಗುವಾಗ ಆಕೆಯ ಮೊಗದಲ್ಲಿ ಭಾವೋದ್ವೇಗದ ಆನಂದಭಾಷ್ಪ ತನ್ನಿಂತಾನೆ ಕೆನ್ನೆಯ ಮೇಲೆ ಜಾರಿಬಿದ್ದ ಆ ಕ್ಷಣವನ್ನು, ಭಾರತೀಯರೆಂದಿಗೂ ಮರೆಯಲಾರರು. ಈ ಮಣ್ಣಿನ ಆತ್ಮೀಯ ಬಂಧನವನ್ನು ಹೃದಯದಲ್ಲಿ ಧಾರಣೆ ಮಾಡಿಕೊಂಡ ಪೂರ್ವೋತ್ತರ ಮೂಲೆಯ ನಾಡಿನ ಸಣ್ಣ ಗ್ರಾಮದ ಹುಡುಗಿಯೊಬ್ಬಳ ದೇಶಭಕ್ತಿಯ ನಿಸ್ವಾರ್ಥ ಅಭಿವ್ಯಕ್ತಿ ರಾಷ್ಟ್ರಕರ ಮನದಲ್ಲಿ ಅಚ್ಚೊತ್ತಿಬಿಟ್ಟಿದೆ. ಮುಗ್ಧವಾದ ಮುಖದಲ್ಲಿ ಸಾರ್ಥಕತೆಯ ಭಾವ ತುಂಬಿತುಳುಕಿ ಮಾತು ಸೋತು ಸಂತಸ ಹೊರಬಂದ ಬಗೆಯದು. ಇನ್ನು ಆಕೆ ರಾಷ್ಟ್ರಧ್ವಜ ಹಿಡಿದು, ಕುತ್ತಿಗೆ ಸುತ್ತ ಗುಮ್ಚಾ ಹೊದ್ದು ಗೆಲುವಿನ ನಗೆ ಬೀರಿದ ದೃಶ್ಯವಂತೂ ಕೋಟ್ಯಾಂತರ ಭಾರತೀಯರ ಭಾವಭಿತ್ತಿಯಲ್ಲಿ ನೆಲೆಯೂರಿಬಿಟ್ಟಿದೆ.**



2018ರ ಕಾಮನ್‌ವೆಲ್ತ್‌ನಲ್ಲಿ 400 ಮೀಟರ್ ಮತ್ತು 4x400ಮೀಟರ್ ರಿಲೇಯಲ್ಲಿ ಹಿಮಾ ಭಾಗವಹಿಸಿದ್ದರು. 400ಮೀಟರ್ ಓಟದಲ್ಲಿ ಅಂತಿಮ ಹಂತಕ್ಕೆ ಆಯ್ಕೆಯಾದರೂ ಆರನೇ ಸ್ಥಾನದಲ್ಲಿ ನಿಲ್ಲಬೇಕಾಯಿತು, ಚಿನ್ನ ಗೆದ್ದ ಬೊಸ್ವಾನದ ಅಮ್ಯಾಂಟಲ್ ಮೊಂಟ್ಶೋರಿಗಿಂತ ಕೇವಲ 1.17 ಸೆಕೆಂಡುಗಳ ಅಂತರದಿಂದಷ್ಟೆ ಹಿಂದಿದ್ದರು. ಈಕೆ ಭಾಗವಹಿಸಿದ್ದ 4ಥ400 ಮೀಟರ್ ರಿಲೇ ಕೂಡ ಅಂತಿಮ ಸುತ್ತಿಗೆ ಆಯ್ಕೆಯಾಗಿತ್ತು.

ಮುಂದೆ, ಫಿನ್ಲ್ಯಾಂಡಿನ ತಾಂಪೇರ್‌ನಲ್ಲಿ ನಡೆಯುತ್ತಿರುವ ಅಂಡರ್–20 ಚಾಂಪಿಯನ್‌ಶಿಪ್‌ನಲ್ಲಿ 51.46 ಸೆಕೆಂಡುಗಳಲ್ಲಿ 400 ಮೀಟರ್ ಓಟದಲ್ಲಿ ಇಡೀ ಜಗತ್ತು ಬೆರಗಾಗುವಂತೆ ಚಿನ್ನ ಗೆದ್ದುಬಿಟ್ಟಳು ಹುಡುಗಿ, ಮೊದಲ ಮುನ್ನೂರು ಮೀಟರ್ ಸಾಧಾರಣವಾಗಿದ್ದರೂ ಕೊನೆಯ ನೂರು ಮೀಟರ್‌ನಲ್ಲಿ ಮೂರು ಓಟಗಾರ್ತಿಯರನ್ನು ಹಿಂದಿಕ್ಕಿ ಪದಕದೊಡತಿಯಾಗಿ ವಿಜೃಂಭಿಸಿದಳು. ಈಗಿದೆಲ್ಲ ಇತಿಹಾಸ.

ಸಾಮಾಜಿಕ ಜಾಲತಾಣಗಳಲ್ಲೆಲ್ಲ ಹಿಮಾದಾಸ್‌ಳಿಗೆ ಅಭಿನಂದನೆಗಳ ಮಹಾಪೂರವೇ ಹರಿದಿದೆ. ನಿಜಕ್ಕೂ ಭಾರತವಾ ಎನಿಸುತ್ತಿದೆಯಾ ?? ಹೌದು ಕ್ರಿಕೆಟ್‌ಲ್ಲದೆ ಬೇರೆ ಯಾವ ಆಟವೂ ಜಗತ್ತಿನಲ್ಲಿಲ್ಲ ಎನ್ನುವಂತೆ ಭಾಸವಾಗುತ್ತಿದ್ದ ಭಾರತದಲ್ಲಿ ಬದಲಾವಣೆಯ ಗಾಳಿ ಬೀಸಿದೆ. ಹಿಮಾ ದಾಸ್‌ಳಂತಹ ಗ್ರಾಮೀಣ ಪ್ರತಿಭೆಗಳ ಸಾಧನೆಯನ್ನೂ ಜನ ತೆರೆದ ಮನಸ್ಸಿನಿಂದ ಸ್ವಾಗತಿಸುತ್ತಿದ್ದಾರೆ. ಹಿಮಾ ದಾಸಳ ಗೆಲುವನ್ನು ತಮ್ಮದೇ ಗೆಲುವೆಂಬಂತೆ ಸಂಭ್ರಮಿಸುತ್ತಿದ್ದಾರೆ. ಹಿಮಾ ಗೆದ್ದಾಗ ಅರೆಬರೆ ಇಂಗ್ಲೀಷಿನಲ್ಲಿ ಪ್ರತಿಕ್ರಿಯೆ ನೀಡಿದರು ಎನ್ನಲಾಗಿ ಟ್ವೀಟ್ ಮಾಡಿದ್ದ ಸ್ಪೋರ್ಟ್ಸ್ ಫೆಡರೇಶನ್ನಿಗೆ ಜನ ಉಗಿದು ಉಪ್ಪಿನಕಾಯಿ ಹಾಕುತ್ತಿದ್ದಾರೆ, ದೇಶದ ಹೆಮ್ಮೆಯ ಮಗಳ ಬಗ್ಗೆ ಹಗುರವಾಗಿ ಮಾತನಾಡುವವರನ್ನ ತರಾಟೆಗೆ ತೆಗೆದುಕೊಳ್ಳುತ್ತಿದ್ದಾರೆ. ಹಿಮಾ ದಾಸಳ ಗೆಲುವನ್ನ ಸಣ್ಣ ಕಾಲಂನ ಸುದ್ದಿ ಮಾಡಿದ ಮುಖ್ಯ ವಾಹಿನಿಯ ಮಾಧ್ಯಮಗಳಿಗೆ ನಿಷ್ಠುರವಾಗಿ ಪ್ರತಿಕ್ರಿಯೆ ನೀಡುತ್ತಿದ್ದಾರೆ. ಹೌದು ಭಾರತದ ಜನ ಬದಲಾಗುತಿದ್ದಾರೆ. ಭಾರತ ಬದಲಾಗುತ್ತಿದೆ. ಬದಲಾವಣೆಯ ಹೊಸ ಗಾಳಿ, ಹೊಸ ದಿಶೆಗೆ ಭಾರತ ತಿರುಗಿಕೊಳ್ಳುತ್ತಿದೆ. ಆಳುವವರಿಗೆ ಆಸ್ಥೆ ಹೆಚ್ಚಾಗಿದೆ. ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿಯವರು ಕಾಮನ್‌ವೆಲ್ತ್‌ನಲ್ಲಿ ಆಡಿ ಗೆದ್ದ ಎಲ್ಲ ಆಟಗಾರರಿಗೆ ಔತಣಕೂಟ ಏರ್ಪಡಿಸಿ ಅಭಿನಂದಿಸಿದ್ದಾರೆ. ಕ್ರೀಡಾಪಟುಗಳಿಗೆ ಹೊಸ ವಿಶ್ವಾಸ ನೀಡುತ್ತಿದ್ದಾರೆ, ಬೆನ್ನಿಗೆ ನಿಂತು ಶಹಬ್ಬಾಸ್ ಹೇಳುತ್ತಿದ್ದಾರೆ. ಎಲ್ಲಾ ಕ್ರೀಡೆಗಳಿಗೂ ಸಮಾನ ಅವಕಾಶ ಸಲ್ಲುತ್ತಿದೆ, ಇಡೀ ಭಾರತ ಈ ನವಸ್ಥಿತ್ಯಂತರಕ್ಕೆ ಅತ್ಯಂತ ಅಕ್ಕರೆಯಿಂದ ತೆರೆದುಕೊಳ್ಳುತ್ತಿದೆ.

ಜೆಎನ್‌ಯುನಂಥಹ ವಿಶ್ವವಿದ್ಯಾಲಯಗಳಲ್ಲಿ ಕೂತು 'ಭಾರತ್ ತೇರೆ ಟುಕ್ಡೆ ಹೋಂಗೆ' ಅಂತ ಎಷ್ಟೇ ಬೊಬ್ಬೆ ಹೊಡೆದರೂ, ದೇಶವನ್ನು ಛಿದ್ರ ಛಿದ್ರ ಮಾಡುವ ಹೊಂಚು ಹಾಕಿದರೂ ಭಾರತದ ಯುವಜನತೆ ಅಂತವರ ತಡೆ ತಿರುಗಿ ಕ್ಯಾರೇ ಎನ್ನುತ್ತಿಲ್ಲ. ದೇಶ ವಿರೋಧಿ ನೀತಿಯನ್ನು, ದೇಶ ಒಡೆಯುವ ಹುನ್ನಾರವನ್ನು ಖಂಡಿಸಿ, ಬಡತನದಲ್ಲೇ ಹುಟ್ಟಿ ಕಷ್ಟ ಪಟ್ಟು ದೇಶಕ್ಕೆ ಕೀರ್ತಿ ತಂದ ಹಿಮಾದಾಸ್‌ಳಂತಹ ದೇಶದ ಮಕ್ಕಳಿಗೆ, ಈ ನೆಲವನ್ನು ಪ್ರೀತಿಸುವ, ಈ ಮಣ್ಣಿನ ಕಣವನ್ನು ದೇವರೆನ್ನುವ ದೇಶಭಕ್ತರ ಬೆನ್ನಿಗೆ ಯುವಜನತೆ ನಿಲ್ಲುತ್ತಿದ್ದಾರೆ.

ಹಿಮಾದಾಸ್‌ನಂತಹ ಹೆಣ್ಣುಮಕ್ಕಳು ದೇಶದ ಖ್ಯಾತಿಯನ್ನು ಮುಗಿಲೆತ್ತರಕ್ಕೇರಿಸುತ್ತಿದ್ದಾರೆ. ಅಷ್ಟೇ ಅಲ್ಲ ದೇಶಕ್ಕಾಗಿ ದುಡಿಯಲು ಎಂತಹ ಹೋರಾಟಕ್ಕೂ ಸಿದ್ಧ ಎನ್ನುವ ಆಕೆಯ ಧೋರಣೆ ನಿಜಕ್ಕೂ ಗಂಟಲುಬ್ಬಿ ಬರುತ್ತದೆ. ಆಕೆ ಮಾಧ್ಯಮದವರೆದುರಿಗೆ ಮಾತನಾಡುತ್ತ– "ನನ್ನ ಭೂತಕಾಲದ ಬಗೆಗೆ ಮಾತನಾಡಲು ಇಷ್ಟವಿಲ್ಲ, ಎಲ್ಲರಿಗೂ ಜೀವನದಲ್ಲಿ ಕಷ್ಟಗಳಿರುತ್ತವೆ, ಆದರೆ ದೇಶಕ್ಕೇನಾದರೂ ಮಾಡಬೇಕೆಂಬ ಹಂಬಲವಿದ್ದರೆ ಹೋರಾಟ ಮಾಡಲೇಬೇಕು. ನನ್ನ ಭೂತಕಾಲ ಹೇಗಿತ್ತು, ನಾನು ನಡೆದು ಬಂದ ಹಾದಿ ಎಷ್ಟು ಕ್ಲಿಷ್ಟಕರವಾಗಿತ್ತು ಅದ್ಯಾವುದರ ಬಗ್ಗೆಯೂ ತಲೆ ಕೆಡಿಸಿಕೊಳ್ಳಲಾರೆ. ಹಿಂದಿನದನ್ನು ಬಿಟ್ಟುಬಿಡಿ, ಇನ್ನು ಮುಂದಿನದರ ಬಗ್ಗೆ ಮಾತನಾಡಿ" ಎಂದು ಪ್ರೇರಣೆ ನೀಡುತ್ತಾರೆ ಚಿನ್ನದ ಹುಡುಗಿ ಹಿಮಾ ದಾಸ್. ಇಂತಹ ಹೆಣ್ಣಮಕ್ಕಳ ಸಂಖ್ಯೆ ಹೆಚ್ಚಾಗಲಿ. ಯುವಜನತೆ ಇಂತಹ ಸಾಧಕರಿಂದ ಸ್ಫೂರ್ತಿ ಪಡೆಯಲಿ, ರಾಷ್ಟ್ರ ಕಟ್ಟುವ ಕಾಯಕದಲ್ಲಿ ತೊಡಗಿಸಿ ಕೊಳ್ಳುವಂತಾಗಲಿ. ■

## 14 ಕೆರೆಗಳ ನಿರ್ಮಾತೃ ಮಲವಳ್ಳಿಯ ಈ ಕೆಂಪೇಗೌಡ

ಚಾಮರಾಜನಗರ ಜಿಲ್ಲೆಯ ಮಲವಳ್ಳಿ ತಾಲೂಕನ್ನು ನಾವೇನಾದರು ಪ್ರವೇಶ ಮಾಡಿದರೆ ನಮ್ಮ ಕಿವಿ ಕೆಂಪೇಗೌಡ ಎಂಬ ಹೆಸರು ಬಿದ್ದೇಬೀಳುತ್ತದೆ. ಆದರೆ ಈ ಕೆಂಪೇಗೌಡ ಬೆಂಗಳೂರಿನ ನಿರ್ಮಾತೃವಲ್ಲ, ಆದರೆ ಕೆರೆಗಳ ಉದ್ಧಾರಕ. ಮಲವಳ್ಳಿಯಲ್ಲಿ ಕೆಂಪೇಗೌಡ ಒಬ್ಬ ಲೆಜೆಂಡ್ ಎನಿಸಿದ್ದಾರೆ, ಯಾರನ್ನೂ ಕೇಳಿದರೂ ಅವರ ಪೂರ್ಣ ವಿವರವನ್ನು ನೀಡುತ್ತಾರೆ. ದಾಸರದೊಡ್ಡಿ ಸಮೀಪ ಇರುವ ನೂರಾರು ಹಟ್ಟಿಗಳ ಪೈಕಿ ಒಂದರಲ್ಲಿ ವಾಸವಿರುವ ಇವರು, 50 ಕುರಿಗಳನ್ನು ಸಾಕುತ್ತಾ, ಗಿಡ ನೆಡುತ್ತಾ, ಪರಿಸರ ಸಂರಕ್ಷಣೆಯ ಕಾಯಕದಲ್ಲಿ ನಿರತರಾಗಿರುತ್ತಾರೆ. ಏಕಾಂಗಿಯಾಗಿ ಕುಂಡಿನಿಬೆಟ್ಟದಲ್ಲಿ 14 ತೊರೆಗಳನ್ನು ನಿರ್ಮಿಸಿದ ಹೆಗ್ಗಳಿಕೆ ಇವರದ್ದು, ಪ್ರಶಸ್ತಿ ರೂಪದಲ್ಲಿ ಸಿಕ್ಕ ಹಣವನ್ನು ಸ್ವಂತಕ್ಕೆ ಬಳಸದೆ ಕೆರೆಗಳ ಪುನರುಜ್ಜೀವನಕ್ಕಾಗಿ ಬಳಸಿದ ಹೆಮ್ಮೆ ಇವರಿಗಿದೆ. ಅಷ್ಟೇ ಅಲ್ಲದೆ ಬೆಟ್ಟದ ಮೂಲೆ ಮೂಲೆಯಲ್ಲಿರುವ ಜನರಿಗೆ ಸಹಾಯಕವಾಗಲು ಸಣ್ಣ ರಸ್ತೆಯನ್ನು ನಿರ್ಮಿಸಿದ ಹೆಗ್ಗಳಿಕೆಯೂ ಇವರದ್ದಾಗಿದೆ. ಬೆಟ್ಟ ಪ್ರದೇಶದಲ್ಲಿನ ತನ್ನ ಗ್ರಾಮದಲ್ಲಿ 40 ವರ್ಷಗಳ ಹಿಂದೆ ಇವರು ತೊರೆ ನಿರ್ಮಾಣ ಕಾರ್ಯ ಆರಂಭ ಮಾಡಿದರು. ಕುರಿಗಳನ್ನು ಆ ಪ್ರದೇಶಕ್ಕೆ ಮೇಯಲು ಕರೆದುಕೊಂಡು ಹೋದಾಗ ಅವುಗಳ ಬಾಯಾರಿಕೆಯನ್ನು ನೀಗಿಸಲು ಮಣ್ಣು ತೋಡಿ ಮರದ ಹಲಗೆಗಳನ್ನು ಇಟ್ಟು ಹಳ್ಳ ನಿರ್ಮಾಣ ಮಾಡಿದರು. ವನ್ಯಜೀವಿಗಳಿಗೂ ಇದರಿಂದ ಸಾಕಷ್ಟು ಪ್ರಯೋಜನವಾಗಿದೆ. ಅದೇ ಕಾರ್ಯ ಮುಂದೆ ಅವರು ಇನ್ನಷ್ಟು ತೊರೆಗಳನ್ನು ಸ್ಥಾಪಿಸಲು ಪ್ರೇರಣೆ ನೀಡಿತು. ನಟ ಸುದೀಪ್ ಕೂಡ ಇವರಿಗೆ ಹಣಕಾಸು ನೆರವು ನೀಡಿದ್ದಾರೆ. ಆ ಹಣದಿಂದ ಅವರು ರಸ್ತೆ ನಿರ್ಮಾಣದ ಕಾರ್ಯ ಮಾಡಿದ್ದಾರೆ. ಮಾತ್ರವಲ್ಲ ತಾವು ನಿರ್ಮಿಸಿದ ಕೆರೆ ತೊರೆಗಳಿಗೆ ಒಂದು ಸರಿಯಾದ ರಚನೆ ನೀಡಿದ್ದಾರೆ. ಅದರ ಸುತ್ತಲೂ ಆಲದ ಮರಗಳನ್ನು ನೆಟ್ಟಿದ್ದಾರೆ. 82ನೇ ವಯಸ್ಸಲ್ಲೂ ಆರೋಗ್ಯವಾಗಿರುವ ಕೆಂಪೇಗೌಡ ಈಗಲೂ ದಿನದ 12 ಗಂಟೆ ಬೆಟ್ಟದಲ್ಲೇ ಸುತ್ತಾಡುತ್ತಿರುತ್ತಾರೆ, ಪ್ರತಿ ಮರಗಳ ಬೆಳವಣಿಗೆ ಮೇಲೆ ಕಣ್ಣಿಟ್ಟಿದ್ದಾರೆ. ದುರಾಸೆಯಿರುವ ಮನುಷ್ಯರೇ ತುಂಬಿರುವ ಈ ಕಾಲದಲ್ಲಿ ಅವರು ಮಾತ್ರ ತಮ್ಮೆಲ್ಲಾ ಗಳಿಕೆಯನ್ನು ಕೆರೆ ತೊರೆ, ಗಿಡ ಮರ, ಬೆಟ್ಟ ಗುಡ್ಡಗಳಿಗಾಗಿ ವಿನಿಯೋಗಿಸುತ್ತಿದ್ದಾರೆ, ಈ ಮೂಲಕ ಹೀರೋ ಎನಿಸಿಕೊಂಡಿದ್ದಾರೆ.



■

# ಕಾಕೋರಿ ಕಾಂಡ (9 ಆಗಸ್ಟ್ 1925)

ಸಂಸ್ಮರಣೆ

ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲಿ ಕಾಕೋರಿ ರೈಲು ದರೋಡೆ ಕಾಂಡ ಒಂದು ಪ್ರಮುಖ ಪ್ರಕರಣ. ಕಾಕೋರಿಯ ಘಟನೆಯಿಂದಾಗಿ ದೇಶದಲ್ಲಿ ಕ್ರಾಂತಿಕಾರಿಗಳ ಕುರಿತಾಗಿ ಸಾಮಾನ್ಯ ಜನರ ದೃಷ್ಟಿಕೋನವೇ ಬದಲಾಯಿತು. ದೇಶಕ್ಕಾಗಿ ಈ ನವತರುಣರು ತುಳಿದಿದ್ದ ಅತಿಕಠಿಣ ಮಾರ್ಗದ ಅರಿವಾಗಿ ಜನರ ಒಲುಮೆ ಗಳಿಸಲು ಶಕ್ಯವಾಯಿತು.

ಇತಿಹಾಸಕಾರರು ಗುರುತಿಸುವಂತೆ, 1857ರ ಕ್ರಾಂತಿಯ ನಂತರ, ಹತ್ತೊಂಬತ್ತನೆಯ ಶತಮಾನದ ಉತ್ತರಾರ್ಧದಲ್ಲಿ ಚಾಪೇಕರ್ ಸಹೋದರರಿಂದ ಆಯ್ರಿಸ್ಟ್ ಮತ್ತು ರ್‍ಯಾಂಡ್‌ನನ್ನು ಕೊಲ್ಲುವುದರೊಂದಿಗೆ ಪ್ರಾರಂಭವಾದ ಸಶಸ್ತ್ರ ಕ್ರಾಂತಿಯ ನವರಾಷ್ಟ್ರೀಯತೆಯ ಅವಧಿಯು ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲಿ ಮಹಾತ್ಮಾ ಗಾಂಧಿಯವರ ಆಗಮನದವರೆಗೂ ನಿರ್ವಿರೋಧವಾಗಿ ಮುಂದುವರೆದಿತ್ತು. ಆದರೆ, ಫೆಬ್ರವರಿ 1922ರಲ್ಲಿ ಚೌರಾಚೌರಿ ಘಟನೆಯ ನಂತರ, ಗಾಂಧಿಯವರು ಅಸಹಕಾರ ಚಳವಳಿಯನ್ನು ಹಠಾತ್ತಾಗಿ ಹಿಂತೆಗೆದುಕೊಂಡಾಗ, ಭಾರತದ ಯುವಕರಲ್ಲಿ ಮನೆಮಾಡಿದ್ದ ನಿರಾಶೆ ಮಾತ್ರ ಕಾಕೋರಿ ಘಟನೆಯಿಂದಾಗಿಯೇ ಪರಿಹರಿಸಲ್ಪಟ್ಟಿತು.

ಆಗಸ್ಟ್ 9, 1925ರಂದು ವೀರ ಕ್ರಾಂತಿಕಾರಿಗಳು ಕಾಕೋರಿ ನಿಲ್ದಾಣದಲ್ಲಿ ರೈಲಿನ ಮೂಲಕ ಸಾಗುತ್ತಿದ್ದ ಸರ್ಕಾರಿ ಸಂಪತ್ತನ್ನು ಲೂಟಿಗೈದರು. ಈ ಘಟನೆಯನ್ನು 'ಕಾಕೋರಿ ಕಾಂಡ' ಎಂದು ಕರೆಯಲಾಗುತ್ತದೆ. ಭಾರತೀಯರಿಂದಲೇ ಆಂಗ್ಲರು ಸಂಗ್ರಹಿಸಿದ್ದ ಅಕ್ರಮ ಸಂಪತ್ತನ್ನು ದೋಚುವ ಮತ್ತು ಆ ಹಣದಿಂದ ದೇಶವನ್ನು ಬ್ರಿಟಿಷರಿಂದ ಮುಕ್ತಗೊಳಿಸಲು ನಡೆಸುತ್ತಿರುವ ಸಶಸ್ತ್ರ ಹೋರಾಟಕ್ಕೆ ಅವಶ್ಯಕವಾದ ಆಯುಧಗಳನ್ನು ಸಂಗ್ರಹಿಸಿ ಬ್ರಿಟಿಷರ ವಿರುದ್ಧ ಯುದ್ಧಮಾಡುವುದೇ ಕ್ರಾಂತಿಕಾರಿಗಳ ಉದ್ದೇಶವಾಗಿತ್ತು. ಕಾಕೋರಿ ರೈಲು ದರೋಡೆಯಲ್ಲಿ ನಿಧಿ ಲೂಟಿ ಮಾಡಿದ ಕ್ರಾಂತಿಕಾರಿಗಳೆಲ್ಲ 'ಹಿಂದುಸ್ಥಾನ್ ರಿಪಬ್ಲಿಕ್ ಅಸೋಸಿಯೇಷನ್' ನ ಸದಸ್ಯರಾಗಿದ್ದರು.






ಸಂಪೂರ್ಣ ಕಾರ್ಯದಲ್ಲಿ ಕೇವಲ 10 ಕ್ರಾಂತಿಕಾರಿಗಳು ತೊಡಗಿದ್ದರು. ಆದರೆ ಘಟನೆಯ ತೀವ್ರತೆಯಿಂದ ದಿಗ್ಭ್ರಮೆಗೆ ಒಳಗಾಗಿದ್ದ ಆಂಗ್ಲ ಸರ್ಕಾರ 40 ಕ್ಕಿಂತ ಹೆಚ್ಚು ಜನರನ್ನು ಛಲ-ಬಲಗಳಿಂದ ಬಂಧಿಸಿತು. ಬ್ರಿಟಿಷರ ಈ ನಡುಕವು ಪ್ರಾಂತ್ಯದ ಅನೇಕ ಪ್ರಕ್ಷುಬ್ಧತೆಗಳಿಗೆ ಕಾರಣವಾಯಿತು.

ಈ ಪ್ರಕರಣದ ವಿಚಾರಣೆಯ ನಂತರ ಏಪ್ರಿಲ್ 6, 1927ರಂದು ಅಂತಿಮ ತೀರ್ಮಾನ ಪ್ರಕಟಿಸಲಾಯ್ತು.

ಇದರಲ್ಲಿ ನ್ಯಾಯಾಧೀಶ ಹ್ಯಾಮಿಲ್ಟನ್ ಕಲಂ 121ಎ, 120ಬಿ, ಮತ್ತು 396ರ ಅಡಿಯಲ್ಲಿ ಕ್ರಾಂತಿಕಾರಿಗಳಿಗೆ ಉಗ್ರ ಶಿಕ್ಷೆ ವಿಧಿಸಿದ. ರಾಮ್ ಪ್ರಸಾದ್ ಬಿಸ್ಮಿಲ್, ರಾಜೇಂದ್ರನಾಥ ಲಾಹಿರಿ, ರೋಷನ್ ಸಿಂಗ್ ಮತ್ತು ಅಶ್ಫಾಖ್ ಉಲ್ಲಾ ಖಾನ್‌ರಿಗೆ ಈ ಪ್ರಕರಣದಲ್ಲಿ ಮರಣದಂಡನೆ ವಿಧಿಸಲಾಯಿತು. ಶಚೀಂದ್ರನಾಥ್ ಸನ್ಯಾಲರಿಗೆ 14 ವರ್ಷಗಳ ಕಠಿಣ ಸಶ್ರಮ ಶಿಕ್ಷೆ, ಮನ್ಮಥನಾಥ್ ಗುಪ್ತ, ಯೋಗೇಶ್ ಚಂದ್ರ ಚಟರ್ಜಿ, ಮುಕುಂದ್ಲಾಲ್, ಗೋವಿಂದ ಚರಕ್ಕರ್, ರಾಜ್‌ಕುಮಾರ್ ಸಿಂಗ್, ರಾಮಕೃಷ್ಣ ಖತ್ರಿ ಅವರಿಗೆ 10 ವರ್ಷಗಳ ಜೈಲು ಶಿಕ್ಷೆ ವಿಧಿಸಲಾಯಿತು. ಗಲ್ಲುಶಿಕ್ಷೆಯ ಸುದ್ದಿಯನ್ನು ಕೇಳಿದ ಜನರು ಸ್ವಯಂಪ್ರೇರಿತರಾಗಿ ಸರ್ಕಾರ ವಿರೋಧಿ ಚಳುವಳಿ ಮತ್ತು ಪ್ರದರ್ಶನಕ್ಕಿಳಿದರು.

ರಾಜೇಂದ್ರನಾಥ್ ಲಾಹಿರಿಯನ್ನು ಡಿಸೆಂಬರ್ 17, 1927ರಂದು ಗೊಂಡಾ ಜೈಲಿನಲ್ಲಿ ಗಲ್ಲಿಗೇರಿಸಲಾಯಿತು. ನೇಣಿಗೆ ಕೆಲವು ದಿನಗಳ ಮುಂಚೆ ಆತ ತನ್ನ ಗೆಳೆಯನಿಗೆ ಬರೆದ ಪತ್ರದಲ್ಲಿ 'ದೇಶದ ಬಲಿವೇದಿಗೆ ನಮ್ಮ ರಕ್ತದ ಅಗತ್ಯವಿದ್ದಂತಿದೆ. ಸಾವು ಎಂದರೇನು? ಜೀವನದ ಇನ್ನೊಂದು ತುದಿಯಲ್ಲದೇ ಮತ್ತೇನೂ ಅಲ್ಲ. ಇತಿಹಾಸವು ಹಿಮ್ಮುಖವಾಗುವುದು ನಿಜವಾಗಿದ್ದಲ್ಲಿ, ನಮ್ಮ ಸಾವು ವ್ಯರ್ಥವಾಗುವುದಿಲ್ಲ, ಎಲ್ಲರಿಗೂ ಕೊನೆಯ ಶುಭಾಶಯ.' ಎಂದು ನಮೂದಿಸಿದ್ದ.

1927, ಡಿಸೆಂಬರ್ 19ರಂದು, ಪಂಡಿತ್ ರಾಮ್‌ಪ್ರಸಾದ್ ಬಿಸ್ಮಿಲ್‌ರನ್ನು ಗೋರಖ್‌ಪುರದ ಜೈಲಿನಲ್ಲಿ ಗಲ್ಲಿಗೇರಿಸಲಾಯಿತು. ಅವರು ತಮ್ಮ ತಾಯಿಗೆ ಪತ್ರವೊಂದನ್ನು ಬರೆದು ದೇಶದ ಜನರಿಗೆ ಸಂದೇಶವನ್ನು ಕಳುಹಿಸಿದರು. "ಭಾರತ್ ಮಾತಾ ಕೀ ಜೈ" ಮತ್ತು "ವಂದೇ ಮಾತರಂ" ಘೋಷಣೆಗಳನ್ನು ಜೋರಾಗಿ ಹೇಳುತ್ತಾ, ಕುಣಿಕೆಯ ವೇದಿಕೆಗೆ ಮದುವಣಿಗನ ಮೆರವಣಿಗೆ ಎಂಬಂತೆ ನಡೆದರು. ಕುಣಿಕೆಯ ಹತ್ತಿರಕ್ಕೆ ಬಂದಾಗ, ಬಿಸ್ಮಿಲ್, "ನಾನು ಬ್ರಿಟಿಷ್ ಸಾಮ್ರಾಜ್ಯವನ್ನು ನಾಶಮಾಡಲು ಬಯಸುತ್ತೇನೆ" ಎಂದು ಗುಡುಗಿದರು. ಕೊನೆಯ ಪ್ರಾರ್ಥನೆಯ ನಂತರ ಗಲ್ಲಿಗೆ ಕೊರಳೊಡ್ಡಿದರು. ಗೋರಖ್‌ಪುರದ ಜನ ಅವರ ಪಾರ್ಥಿವ ಶರೀರವನ್ನು ನಗರದಲ್ಲೆಲ್ಲ ಹೊತ್ತುಕೊಂಡು ಪ್ರದರ್ಶಿಸಿದರು. ಅವರ ದೇಹದ ಮೇಲೆ ಸುಗಂಧದ್ರವ್ಯ ಮತ್ತು ಹೂವುಗಳ ಮಳೆಗರೆದರು.

ಈ ಘಟನೆಯ ಮೂರನೇ ಹುತಾತ್ಮ ಠಾಕೂರ್ ರೋಷನ್ ಸಿಂಗ್‌ರನ್ನು ಅಲಹಾಬಾದ್‌ನಲ್ಲಿ ಗಲ್ಲಿಗೇರಿಸಲಾಯಿತು. ತನ್ನ ಸ್ನೇಹಿತನಿಗೆ ಬರೆದ ಪತ್ರದಲ್ಲಿ ಠಾಕೂರ್ ರೋಷನ್ ಸಿಂಗ್ "ನಮ್ಮ ಪವಿತ್ರ ಗ್ರಂಥಗಳಲ್ಲಿ, ಧರ್ಮಯುದ್ಧದಲ್ಲಿ ಜೀವಕೊಡುವ ವ್ಯಕ್ತಿ ಮತ್ತು ಕಾಡಿನಲ್ಲಿ ತಪಸ್ಸಾಚರಿಸಿದ ಇಬ್ಬರೂ ಸಮಾನ ಗತಿಯನ್ನೇ ಹೊಂದುತ್ತಾರೆ ಎಂದೇ ಬರೆಯಲಾಗಿದೆ " ಎಂದು ಉಲ್ಲೇಖಿಸುತ್ತಾರೆ.

ಅಶ್ಫಾಖ್ ಉಲ್ಲಾ ಖಾನ್ ಕಾಕೋರಿ ಕಾಂಡದ ನಾಲ್ಕನೆಯ ಹುತಾತ್ಮ ಅವರನ್ನು ಫೈಜಾಬಾದ್‌ನಲ್ಲಿ ಗಲ್ಲಿಗೇರಿಸಲಾಯಿತು. ಬಲಿವೇದಿಕೆಯವರೆಗೆ ಖುರಾನಿನ ಪಠಣವನ್ನು ಮಾಡುತ್ತ ಸಾಗಿದ ಖಾನ್ ಅಂತಿಮವಾಗಿ, ನೆರೆದ ಸಾರ್ವಜನಿಕರಿಗೆ, "ನನ್ನ ಕೈಗಳು ಮಾನವ ರಕ್ತದಿಂದ ತೋಯ್ದಿಲ್ಲ. ನನ್ನ ಮೇಲೆ ಹೇರಿರುವ ಆಪಾದನೆಗಳೆಲ್ಲವೂ ತಪ್ಪು. ನನಗೆ ನ್ಯಾಯ ದೇವರಲ್ಲೇ ಸಿಗಲಿದೆ" ಎಂದು ಹೇಳಿ ಕುಣಿಕೆಯ ಹಾರವನ್ನು ಖುಷಿಯಿಂದ ಧರಿಸಿದರು.

ಈ ನಡುವೆ ನಡೆದ ಇನ್ನೊಂದು ಘಟನೆ ವಿಸ್ಮಯಗೊಳಿಸುವಂತಹದು. ಡಿಸೆಂಬರ್ 19 1925ರಂದು ಸರಕುಗಾಡಿಯ ಮೂಲಕ ಶಹಜಹಾನ್‌ಪುರಕ್ಕೆ ಅಶ್ಫಾಖ್‌ರ ಮೃತದೇಹವನ್ನು ಸಾಗಿಸುತ್ತಿದ್ದಾಗ ರೈಲು ಬಲಮಾವು ನಿಲ್ದಾಣಕ್ಕೆ ಬಂದಿತು. ಆಗ ಸೂಟು-ಬೂಟು ಧರಿಸಿದ್ದ ಅಧಿಕಾರಿಯಂತೆ ಕಾಣುತ್ತಿದ್ದವನೊಬ್ಬ ಗಾಡಿಯೊಳಕ್ಕೆ ಬಂದು "ಶಹೀದ್-ಎ-ಆಝಮ್‌ರನ್ನು ನಾವು ನೋಡ ಬಯಸುತ್ತೇವೆ" ಎಂದವನೇ ಪಾರ್ಥಿವ ಶರೀರದ ದರ್ಶನ ಮಾಡಿ ನಿಲ್ಲದೆ ಹೊರಟೇ ಬಿಟ್ಟ, ಅಲ್ಲಿದ್ದವರೆಗೆ ಹಾಗೆ ಬಂದದ್ದು ಯಾರು? ಎಂದು ತಿಳಿಯಲು ಹಲವಾರು ದಿವಸಗಳೇ ಬೇಕಾಯ್ತು. ಆತ ರಾಮ್‌ಪ್ರಸಾದ್ ಬಿಸ್ಮಿಲ್ ನೇತೃತ್ವದ ತಂಡ ಹೊತ್ತಿಸಿದ್ದ ಕ್ರಾಂತಿಯ ಕಿಡಿಯನ್ನು ಮುಂದೆ ಜ್ವಾಲಾಗ್ನಿಯಾಗಿಸಿದ ಇನ್ನೋರ್ವ ಕ್ರಾಂತಿಕಾರಿ ಚಂದ್ರಶೇಖರ ಆಜಾದ್‌ನಾಗಿದ್ದ!

## ಪುಸ್ತಕದಿಂದ...

ವಸಾಹತು ಪೂರ್ವದ ಭಾರತದಲ್ಲಿ ಜಾತಿ-ವರ್ಣ ಪದ್ಧತಿಗೆ ಜನಾಂಗ, ಮಾನವ ಕುಲದ ಸಮುದಾಯ ಅಥವಾ ಮನುಕುಲದ ಹುಟ್ಟಿನೊಂದಿಗೆ ಯಾವ ಸಂಬಂಧವೂ ಇರಲಿಲ್ಲ. ಅದು ವ್ಯಕ್ತಿಯ ಕಾಯಕದಿಂದ, ಪಾರಂಪರಿಕ ವಾಗಿ ಅಥವಾ ಕೌಟುಂಬಿಕವಾದ ಸಾಮಾಜಿಕ ಸ್ಥಾನವನ್ನಾಧರಿಸಿದ ಭೇದ-ವರ್ಗಗಳೆಂದು ತಿಳಿಯಲಾಗುತ್ತಿತ್ತು.




'ಜಾತಿ' ಎಂಬುದು ತೀರಾ ಸ್ಥಾನೀಯವಾದ ಮತ್ತು ಜಟಿಲವಾಗಿ ವ್ಯವಸ್ಥಿತವಾದ ಸಾಮಾಜಿಕ ರಚನೆಯಾಗಿದೆ. ಪಾಶ್ಚಾತ್ಯ- ಭಾರತ ಶಾಸ್ತ್ರಜ್ಞರು ಸ್ಪಷ್ಟವಾಗಿಯೇ ಕಡೆಗಣಿಸಿದ ಒಂದು ಪ್ರಮುಖ 'ಜಾತಿ' ಲಕ್ಷಣವೆಂದರೆ ಅದರ ಗತಿಶೀಲತೆ. ಈ ಗ್ರಾಮೀಣ ಸಾಮಾಜಿಕ ರಚನೆಗಳು ಹೆಚ್ಚು ಸಮಪಾತಳಿಯಲ್ಲಿ (Horizontal) ವ್ಯವಸ್ಥಿತವಾದವುಗಳಾಗಿದ್ದವೇ ಹೊರತು ಲಂಬ (Vertical) ರೇಖೆಯಲ್ಲಿ ವಿಭಜಿತವಾದ ಸ್ತರಗಳಾಗಿರಲಿಲ್ಲ. ಜಾತಿ-ವರ್ಣ ಪದ್ಧತಿಯ ಈ ಅಂತರ್ಗತ ಲಕ್ಷಣವೇ, ಗಾಂಧಿಯವರಿಗೆ ಆದರ್ಶ ಭಾರತೀಯ ಸಮಾಜಕ್ಕೆ ಪಾಶ್ಚಾತ್ಯ 'ಪಿರಾಮಿಡ್' ಮಾದರಿಗಿಂತ 'ಓಶಿಯಾನಿಕ್ ಸರ್ಕಲ್'ನ ಮಾದರಿಯನ್ನು ಪ್ರತಿಪಾದಿಸಲು ಪ್ರೇರಕ ಕಾರಣವಾಯಿತು.

### ಪುಸ್ತಕದ ಹೆಸರು : ಭಾರತ ಭಂಜನ

ಭಾರತ ವಿರೋಧಿ ತರ್ಕಗಳು, ಭಾರತವನ್ನು ವಿಚ್ಛಿದ್ರಗೊಳಿಸುವ ಹುನ್ನಾರಗಳು ಮತ್ತು ಅವುಗಳನ್ನು ಪೋಷಿಸುತ್ತಿರುವ ಪಟ್ಟಭದ್ರ ಹಿತಾಸಕ್ತಿಯ ಪಾಶ್ಚಾತ್ಯ ಸಂಸ್ಥೆಗಳು, ಇವುಗಳ ಜೊತೆಗೇ ತಮ್ಮನ್ನು ತಾವೇ ಬೌದ್ಧಿಕ ದಾಸ್ಯಕ್ಕೆ ಒಡ್ಡಿಕೊಂಡ ನಮ್ಮವರು, ಇಂಥವರ ವಿಸ್ತೃತ ವಿವರಗಳನ್ನು ಅಧ್ಯಯನಪೂರ್ಣ ಪರಾಮರ್ಶೆ, ವಸ್ತುನಿಷ್ಠ ವಿಶ್ಲೇಷಣೆಗಳನ್ನು ಮೂಲಕ ತೆರೆದಿಡುವ ಕೃತಿ ಭಾರತ ಭಂಜನ.

ಲೇಖಕರು : ರಾಜೀವ್ ಮಲ್ಹೋತ್ರ, ಅರವಿಂದನ್ ನೀಲಕಂಡನ್

ಕನ್ನಡಕ್ಕೆ : ಲಕ್ಷ್ಮೀಕಾಂತ್ ಹೆಗಡೆ

## ಎಲ್ಲೋ ಕೇಳಿದ ಕಥೆ

ಅದೊಮ್ಮೆ ಚಂದ್ರಗುಪ್ತ ಮೌರ್ಯ ಮತ್ತು ಆತನ ಗುರುಗಳಾದ ಆಚಾರ್ಯ ಚಾಣಕ್ಯರು ಮಾತನಾಡುತ್ತ ಕುಳಿತ್ತಿದ್ದರು. ಮಾತಿನ ಮಧ್ಯೆ ಚಂದ್ರಗುಪ್ತನು "ಆಚಾರ್ಯರೇ ನಿಮ್ಮ ಗುಣದಂತೆ ನಿಮ್ಮ ರೂಪವೂ ಇದ್ದರೆ ಚೆನ್ನಾಗಿತ್ತು" ಎಂದನು. ಆಗ ಚಾಣಕ್ಯರು "ರಾಜನೇ, ವ್ಯಕ್ತಿಯನ್ನು ಅಳೆಯುವುದು ರೂಪದಿಂದ ಅಲ್ಲ. ಗುಣದಿಂದ" ಎಂದರು. ಆಗ ಚಂದ್ರಗುಪ್ತನು "ರೂಪಕ್ಕಿಂತ ಗುಣವು ಮಿಗಿಲು ಎಂದು ಉದಾಹರಣೆ ಮೂಲಕ ನಿರೂಪಿಸಿ" ಎಂದು ಸವಾಲೆಸೆದನು. ಆಗ ಬೇಸಿಗೆಯ ಕಾಲ. ಚಂದ್ರಗುಪ್ತನಿಗೆ ಬಹಳ ಬಾಯಾರಿಕೆ ಆಗಿತ್ತು. ಮಾತಿನ ಮಧ್ಯೆ ಕುಡಿಯುವ ನೀರನ್ನು ತರಲು ಸೇವಕರಿಗೆ ಆಜ್ಞಾಪಿಸಿದನು.

ಆಗ ಆಚಾರ್ಯ ಚಾಣಕ್ಯರು ಸೇವಕನ ಕಿವಿಯಲ್ಲಿ ಏನೋ ಹೇಳಿದರು. ಸೇವಕನು ಎರಡು ಪಾತ್ರೆಗಳಲ್ಲಿ ನೀರು ತಂದನು. ಅವುಗಳಲ್ಲಿ ಒಂದು ಚಿನ್ನದ ಪಾತ್ರೆ ಮತ್ತೊಂದು ಕಪ್ಪು ಮಣ್ಣಿನ ಮಡಿಕೆ ಆಗಿತ್ತು. ಸೇವಕ ಹತ್ತಿರ ಬರುತ್ತಿದ್ದಂತೆ ನೀರಡಿಸಿದ ಚಂದ್ರಗುಪ್ತ ಮಣ್ಣಿನ ಪಾತ್ರೆಗೆ ಕೈ ಹಾಕಿದ. ತಕ್ಷಣ ಚಾಣಕ್ಯರು ಅವನನ್ನು ತಡೆದು "ರಾಜನೇ ಏನಿದು? ಚಿನ್ನದ ಪಾತ್ರೆಯ ನೀರನ್ನು ಕುಡಿಯುವುದು ಬಿಟ್ಟು ಈ ಮಣ್ಣಿನ ಪಾತ್ರೆಯ ನೀರು ಕುಡಿಯುವುದೇ ಎಂದು ಪ್ರಶ್ನಿಸಿದರು. ಆಗ ಚಂದ್ರಗುಪ್ತನು "ಛೆ! ಚಿನ್ನದ ಪಾತ್ರೆಯ ನೀರು ಮಣ್ಣಿನ ಪಾತ್ರೆಯ ನೀರಿನಂತೆ ತಂಪಾಗಿ, ರುಚಿಯಾಗಿ ಇರುವುದಿಲ್ಲವಲ್ಲ" ಎಂದನು. ಆಗ ಚಾಣಕ್ಯರು ನಗುತ್ತಾ "ನೋಡು, ನಿನಗೆ ಚಿನ್ನದ ಪಾತ್ರೆಯ ನೀರಿಗಿಂತ ಮಣ್ಣಿನ ಪಾತ್ರೆಯ ನೀರು ಹಿಡಿಸಿತಲ್ಲವೇ? ನೀನು ಪಾತ್ರೆ ನೋಡಲಿಲ್ಲ. ಬದಲಿಗೆ ರುಚಿಯಾದ ಮತ್ತು ತಂಪಾದ ನೀರನ್ನು ಬಯಸಿದೆಯಲ್ಲವೇ? ಅದರಂತೆ ಮನುಷ್ಯನ ರೂಪಕ್ಕಿಂತ ಅವನ ಗುಣವೇ ಮೇಲಲ್ಲವೇ ?" ಎಂದು ಕೇಳಿದರು. ಆಗ ಚಂದ್ರಗುಪ್ತನು ಮರುಮಾತಿಲ್ಲದೆ ಗುರುಗಳ ವಾಕ್ಯಕ್ಕೆ ಸಮ್ಮತಿಸಿದನು.

**ಈ ದೇಶ ಜೀವಂತ. ಚೇತನಾಮಯ. ಇದು ಬರಿಯ ಕಲ್ಲು ಮಣ್ಣಿನ ರಾಶಿ ಅಲ್ಲ, ಜಗಜ್ಜನನಿಯ ಮೂರ್ತಸ್ವರೂಪ.**

**ರಾಷ್ಟ್ರವೇ ನಮ್ಮ ದೇವರು. ರಾಷ್ಟ್ರೀಯತೆಯೇ ನಮ್ಮ ಧರ್ಮ. ರಾಷ್ಟ್ರೀಯತೆಗೆ ಸಾವಿಲ್ಲ. ಯಾವುದೇ ಶಸ್ತ್ರಾಸ್ತ್ರಗಳಿಂದಲೂ ಅದನ್ನು ನಾಶಪಡಿಸಲು ಸಾಧ್ಯವಿಲ್ಲ.**

– ಯೋಗಿ ಅರವಿಂದ



ಸಂಪಾದಕೀಯ ಸಹಕಾರ : ತನ್ಮಯೀ ಪ್ರೇಮ್‌ಕುಮಾರ್, ಶೈಲೇಶ್ ಕುಲಕರ್ಣಿ, ರಾಧಾಕೃಷ್ಣ ಹೊಳ್ಳ, ಸುನೀಲ್ ಕುಲಕರ್ಣಿ (www.news13.in), ಸತ್ಯನಾರಾಯಣ ಶಾನಭಾಗ್

## 'ಡಬ್ಬಾವಾಲಾ'ಗಳಿಗಾಗಿ 13 ವರ್ಷದ ಬಾಲಕನಿಂದ ಆ್ಯಪ್ ಆಧಾರಿತ ಕೊರಿಯರ್ ಸೇವೆ



13 ವರ್ಷದ ಮುಂಬಯಿಯ ಬಾಲಕನೊಬ್ಬ ಅಪ್ಲಿಕೇಶನ್ ಆಧಾರಿತ ಕೊರಿಯರ್ ಸರ್ವಿಸ್‌ನ್ನು ಆರಂಭಿಸಿದ್ದು, ರಿಯಲ್ ಟೈಮ್ ಟ್ರ್ಯಾಕಿಂಗ್ ಸೇವೆ ಒದಗಿಸಲಿದೆ. ಇದು ಮಾಯಾನಗರಿಯ ಜನಪ್ರಿಯ 'ಡಬ್ಬಾವಾಲಾ'ಗಳಿಗೆ ಪ್ರಯೋಜನಕಾರಿಯಾಗಲಿದೆ. ತಿಲಕ್ ಮೆಹ್ತಾ ಎಂಬ ಬಾಲಕ 'ಪೇಪರ್ಸ್ ಎನ್ ಪಾರ್ಸೆಲ್ಸ್' ಎಂಬ ಈ ಸ್ಟಾರ್ಟ್‌ಅಪ್‌ನ್ನು ಆರಂಭಿಸಿದ್ದು, ಸಣ್ಣ ಪಾರ್ಸೆಲ್, ಟಿಫಿನ್ ಮತ್ತು ಮುಖ್ಯ ದಾಖಲೆಗಳ ಸಾಗಾಣೆಗೆ ಬಹಳಷ್ಟು ಪ್ರಯೋಜನಕಾರಿ ಎನಿಸಿದೆ. ಮಾವನ ಮನೆಯಲ್ಲಿ ಪುಸ್ತಕ ಬಿಟ್ಟು ಬಂದಿದ್ದ ಕಪಿಲ್, ಅದನ್ನು ತರಲು ಕೊರಿಯರ್ ಸೇವೆಗಳಿಗಾಗಿ ಎದುರು ನೋಡಿದ್ದ. ಆದರೆ ಅಂತಹ ಯಾವುದೇ ಸೇವೆ ಆತನಿಗೆ ಸಿಗಲಿಲ್ಲ. ಸಿಕ್ಕರೂ ಅದರ ಬೆಲೆ ರೂ.200–250 ಆಗಿತ್ತು. ಇದರಿಂದಾಗಿ ಅಪ್ಲಿಕೇಶನ್ ಆಧಾರಿತ ಕೊರಿಯರ್ ಸೇವೆ ಆರಂಭಿಸುವ ಐಡಿಯಾ ಆತನಿಗೆ ಹೊಳೆಯಿತು. ಅಪ್ಲಿಕೇಶನ್ ಮತ್ತು ಈತನ ವೆಬ್‌ಸೈಟ್‌ಗೆ ರಿಜಿಸ್ಟರ್ ಆಗಿ ಯಾರೂ ಬೇಕಾದರೂ ಪಾರ್ಸೆಲ್‌ಗೆ ಆರ್ಡರ್ ಮಾಡಬಹುದಾಗಿದೆ. ಈತ ತನ್ನ ಸೇವೆಗಳಿಗೆ ಡಬ್ಬಾವಾಲಾಗಳನ್ನೂ ಒಳಪಡಿಸಿದ್ದಾನೆ. ಇದರಿಂದ ಅವರ ಆದಾಯವೂ ಹೆಚ್ಚಳವಾಗಿದೆ.

## ಎರಡನೇ ಬಾರಿಗೆ ವಿಶ್ವದ 3ನೇ ಅತೀ ಶ್ರೇಷ್ಠ ನಗರ ಎನಿಸಿದ ಉದಯ್‌ಪುರ

ರಾಜಸ್ಥಾನದ ಉದಯ್‌ಪುರ ಮತ್ತೊಮ್ಮೆ ವಿಶ್ವದ ಮೂರನೇ ಅತೀ ಶ್ರೇಷ್ಠ ನಗರ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಟ್ರಾವೆಲ್ + ಲೀಸುರ್ ಮ್ಯಾಗಝಿನ್ ನೀಡಿರುವ ರ‍್ಯಾಂಕಿಂಗ್‌ನಲ್ಲಿ ಮೇವಾರದ ಮಹಾರಾಣಾರುಗಳು 16ನೇ ಶತಮಾನ ದಲ್ಲಿ ನಿರ್ಮಿಸಿರುವ ಉದಯ್‌ಪುರ ವಿಶ್ವದ 15 ನಗರಗಳ ಪೈಕಿ 3ನೇ ಅತ್ಯುತ್ತಮ ನಗರ ಎಂಬ ಹೆಗ್ಗಳಿಕೆಗೆ ಎರಡನೇ ಬಾರಿ ಪಾತ್ರವಾಗಿದೆ. ಟಾಪ್ ಸ್ಥಾನದಲ್ಲಿ ಮೆಕ್ಸಿಕೋದ ಎರಡು ನಗರಗಳಾದ ಅಲ್ಲೆಂಡೆ ಮತ್ತು ಓಕ್ಸಕಾ ಸ್ಥಾನ ಪಡೆದುಕೊಂಡಿದೆ. ವಿಶ್ವದ ಅತ್ಯುತ್ತಮ ನಗರ ಸಮೀಕ್ಷೆಯ ಭಾಗವಾಗಿ ಟ್ರಾವೆಲ್ + ಲೀಸುರ್ ಜನರಿಂದ ಅಭಿಪ್ರಾಯವನ್ನು ಸಂಗ್ರಹಿಸಿತ್ತು. ನಗರದ ಪರಿಸರ, ಹೆಗ್ಗುರುತು, ಸಂಸ್ಕೃತಿ, ತಿನಿಸು, ಸ್ನೇಹಪರತೆ, ಶಾಪಿಂಗ್ ಸೇರಿದಂತೆ ಒಟ್ಟಾರೆ ಮೌಲ್ಯವನ್ನು ಪರಿಗಣಿಸಿ ರ‍್ಯಾಂಕಿಂಗ್ ನೀಡಲಾಗಿದೆ.

## ಮಕ್ಕಳು ದೊಡ್ಡ ಅಧಿಕಾರಿಗಳಾದರೂ ಕಸ ಗುಡಿಸುವ ಕಾಯಕ ಬಿಡದ ಆದರ್ಶಮಯಿ ತಾಯಿ



ತನ್ನ ಮೂವರು ಮಕ್ಕಳು ದೊಡ್ಡ ಅಧಿಕಾರಿಗಳಾದರೂ ಕಸ ಗುಡಿಸುವ ಕಾಯಕವನ್ನು ಮುಂದುವರೆಸುವ ಮೂಲಕ ಜಾರ್ಖಾಂಡ್‌ನ ಸುಮಿತ್ರಾ ದೇವಿ ಎಲ್ಲರಿಗೂ ಆದರ್ಶ ರಾಗಿದ್ದರು, ಅದೇ ಕಾರಣಕ್ಕೆ ಅವರ ನಿವೃತ್ತಿಯ ದಿನದಂದು ಅವರನ್ನು ಸನ್ಮಾನಿಸಲು ಜನಸಮೂಹವೇ ಬಂದು ಸೇರಿತ್ತು. ಝಾರ್ಖಂಡ್‌ನ ಸಿಸಿಎಲ್ ಬಡಾವಣೆಯ ಬೀದಿಯನ್ನು ಕಳೆದ 30 ವರ್ಷಗಳಿಂದ ಕಸ ಗುಡಿಸುತ್ತಿರುವ ಸುಮಿತ್ರಾ ಅವರ ಒಬ್ಬ ಮಗ ಸಿವಾನ್‌ನ ಜಿಲ್ಲಾಧಿಕಾರಿ, ಮತ್ತೊಬ್ಬ ಮಗ ರೈಲ್ವೇ ಎಂಜಿನಿಯರ್ ವಿರೇಂದ್ರ ಕುಮಾರ್, ಕೊನೆಯ ಮಗ ವೈದ್ಯ ಧೀರೇಂದ್ರ ಕುಮಾರ್. ಕಸ ಗುಡಿಸಿ ಬಂದ ಆದಾಯದಲ್ಲೇ ಇಬ್ಬರು ಮಕ್ಕಳನ್ನು ಓದಿಸಿ ಇಷ್ಟು ದೊಡ್ಡ ಹುದ್ದೆಗೇರಿಸಿ ಹಿರಿಮೆ ಸುಮಿತ್ರಾ ದೇವಿಯವರದ್ದು. ತಾಯಿಯ ನಿವೃತ್ತಿ ದಿನದಂದು ಇಬ್ಬರೂ ಮಕ್ಕಳು ಆಗಮಿಸಿ ಅವರಿಗೆ ಗೌರವ ಸಲ್ಲಿಸಿದ್ದು ನೋಡುಗರನ್ನು ಆಶ್ಚರ್ಯ ಚಕಿತಗೊಳಿಸಿದೆ. ಮಕ್ಕಳು ಅಧಿಕಾರಿಗಳಾಗಲು ಕಾರಣವಾದ ಕಾಯಕವನ್ನು ನಾನೇಕೆ ತ್ಯಜಿಸಲಿ ಎನ್ನುತ್ತಲೇ ಸುಮಿತ್ರಾ ಅವರು ಇದುವರೆಗೆ ಗೌರವದಿಂದಲೇ ಕಸ ಗುಡಿಸಿದ್ದಾರೆ, ಈ ಮೂಲಕ ಯಾವ ಕಾರ್ಯವೂ ಕೀಳಲ್ಲ, ಯಾವ ಕಾರ್ಯವೂ ಮೇಲಲ್ಲ ಎಂಬುದನ್ನು ತೋರಿಸಿಕೊಟ್ಟಿದ್ದಾರೆ.

# ಜಮ್ಮು ಕಾಶ್ಮೀರದ ಕುಗ್ರಾಮಗಳಿಗೆ 17,000 ಸೋಲಾರ್ ಲೈಟ್ ಹಂಚಿದ ಸೇನೆ



ಜಮ್ಮು ಕಾಶ್ಮೀರದ ಗ್ರಾಮೀಣ ಭಾಗಗಳ ಅಭಿವೃದ್ಧಿ ಕಾರ್ಯಗಳಲ್ಲಿ ಭಾರತೀಯ ಸೇನೆ ಮಹತ್ವದ ಪಾತ್ರವನ್ನು ನಿಭಾಯಿಸುತ್ತಿದೆ. ಅಲ್ಲಿನ ಜನರ ಸಬಲೀಕರಣಕ್ಕಾಗಿ ತನ್ನಿಂದಾದ ಕೊಡುಗೆಯನ್ನು ನೀಡುತ್ತಾ ಬರುತ್ತಿದೆ. ತನ್ನ ಮಹಾತ್ವಾಕಾಂಕ್ಷೆಯ ರೋಶನಿ ಯೋಜನೆಯಡಿ ಸೇನೆಯು ಜಮ್ಮು ಕಾಶ್ಮೀರದ ಕುಗ್ರಾಮಗಳಲ್ಲಿ ಸುಮಾರು 17 ಸಾವಿರ ಸೋಲಾರ್ ಲೈಟ್‌ಗಳನ್ನು ಹಂಚಿಕೆ ಮಾಡಿದೆ. ವಿದ್ಯುತ್ತನ್ನೇ ಕಾಣದ ದೋಡ ಜಿಲ್ಲೆಯ ಗ್ರಾಮಗಳಿಗೆ ಲೈಟ್ ವಿತರಣೆ ಮಾಡಲಾಗಿದ್ದು, ಇದರಿಂದ ಅಲ್ಲಿನ ಜನರ ಜೀವನದಲ್ಲಿ ತುಸು ನಿರಾಳತೆ ಮೂಡಿದೆ. ವಾನಿ ಪುರ, ಬೈನ್ ಗೋತ್, ಬಾನಿ–ಬತೊಲಿ, ದೂರು, ಕೋಟ–ಟಾಪ್, ಶಂಕೋಜ, ಗಂಗೂರಿ, ಯಾರಿವನ್, ಮಾಗ್ರೆ ಮೊಹಲ್ಲಾ, ತಂತ, ಬಗ್ದನ್, ದ್ರಮನ್, ಕುತಲ್ ಮುಂತಾದ ಪ್ರದೇಶಗಳ ಬಡ ಜನರಿಗೆ ಸೋಲಾರ್ ಲೈಟ್‌ಗಳನ್ನು ಸೇನೆ ಹಂಚಿಕೆ ಮಾಡಿದೆ. ಇಂತಹ ಯೋಜನೆಗಳು ಸೇನೆ ಮತ್ತು ಸ್ಥಳಿಯ ನಾಗರಿಕ ನಡುವಣ ಸಂಪರ್ಕವನ್ನು, ಬಾಂಧವ್ಯವನ್ನು ಉತ್ತಮಪಡಿಸುತ್ತದೆ ಎಂಬುದರಲ್ಲಿ ಅನುಮಾನವಿಲ್ಲ.

## ಕ್ಯಾನ್ಸರ್ ರೋಗವನ್ನು ಗುಣಪಡಿಸುವ ಫಾರ್ಮುಲ ಕಂಡುಹಿಡಿದ ರಾಯ್ಪುರ್ ಮೂಲದ ಸಂಶೋಧಕಿ




ರಾಯ್ಪುರ ಮೂಲದ ಸಂಶೋಧಕಿ ಮಮತಾ ತ್ರಿಪಾಠಿ ಎಂಬುವವರು ಕ್ಯಾನ್ಸರ್ ರೋಗವನ್ನು ಗುಣಪಡಿಸುವ ಫಾರ್ಮುಲ ಕಂಡುಹಿಡಿರುವುದಾಗಿ ಘೋಷಣೆ ಮಾಡಿದ್ದಾರೆ. ಈ ಫಾರ್ಮುಲ ಶೇ.70–80 ರಷ್ಟು ಕ್ಯಾನ್ಸರ್ ಕಣಗಳನ್ನು ಕೊಲ್ಲುತ್ತದೆ, ಈ ಬಗ್ಗೆ ಲ್ಯಾಬ್ ಟೆಸ್ಟ್ ಮಾಡಿ ಯಶಸ್ವಿಯಾಗಿದ್ದೇವೆ ಎಂದು ಅವರು ಪ್ರತಿಪಾದಿಸಿದ್ದಾರೆ. ಮುಂದಿನ ಹೆಜ್ಜೆಯಾಗಿ ಇಲಿಗಳಂತಹ ಸಣ್ಣ ಪ್ರಾಣಿಗಳ ಮೇಲೆ ಇದನ್ನು ಪ್ರಯೋಗಿಸುವುದಾಗಿ ಹೇಳಿದ್ದಾರೆ. ಈ ಸಂಶೋಧನೆಗಾಗಿ ಅವರು 4.5 ರಿಂದ 5 ವರ್ಷಗಳನ್ನು ತೆಗೆದುಕೊಂಡಿದ್ದಾರೆ.

## ಸ್ವತಃ ಪ್ಯಾಡ್ ತಯಾರಿಸಿ ಸ್ಲಂನ ಹೆಣ್ಣುಮಕ್ಕಳಿಗೆ ಹಂಚುತ್ತಾರೆ ಈ ಯುವತಿಯರು



ಬಾಲಿವುಡ್ ನಟ ಅಕ್ಷಯ್ ಕುಮಾರ್ ಅಭಿನಯದ 'ಪ್ಯಾಡ್‌ಮ್ಯಾನ್' ಸಿನಿಮಾದಿಂದ ಪ್ರೇರಿತರಾಗಿ ಪಂಜಾಬ್‌ನ ಚಂಡೀಗಢ ಮೂಲದ ಇಬ್ಬರು ಯುವತಿಯರು 'ಸ್ಪಾಟ್ ಫ್ರೀ' ಎಂಬ ನೈರ್ಮಲ್ಯ ಅಭಿಯಾನವನ್ನು ಸ್ಲಂನಲ್ಲಿನ ಹೆಣ್ಣು ಮಕ್ಕಳಿಗಾಗಿ ಆರಂಭಿಸಿದ್ದಾರೆ. ಜಾನ್ವಿ ಮತ್ತು ಲಾವಣ್ಯ ಜೈನ್ ಎಂಬ ಯುವತಿಯರು ಬಡ ಹೆಣ್ಣು ಮಕ್ಕಳಿಗಾಗಿ ಶುದ್ಧ ಸ್ಯಾನಿಟರಿ ಪ್ಯಾಡ್‌ಗಳನ್ನು ತಯಾರಿಸಿ ಸ್ಲಂಗಳಲ್ಲಿ ಹಂಚುತ್ತಿದ್ದಾರೆ. ಪ್ಯಾಡ್‌ಮ್ಯಾನ್ ಸಿನಿಮಾ ನೋಡಿದ ಬಳಿಕ ಬಡ ಹೆಣ್ಣುಮಕ್ಕಳಿಗೆ ಪ್ಯಾಡ್ ಖರೀದಿಸಿ ಹಂಚಬೇಕು ಎಂಬ ಆಶಯ ಇವರಿಗೆ ಮೂಡಿತ್ತು, ಆದರೆ ಖರ್ಚು ಸಿಕ್ಕಾಪಟ್ಟೆ ಆಗುವುದರಿಂದ ತಾವೇ ಸ್ವತಃ ಪ್ಯಾಡ್ ತಯಾರಿಸುವ ಕಾರ್ಯಕ್ಕೆ ಇಳಿದಿದ್ದಾರೆ. ರೂ. 2 ಖರ್ಚು ಮಾಡಿ ಇವರು ಒಂದು ಪ್ಯಾಡ್ ತಯಾರಿಸುತ್ತಾರೆ, ಬಳಿಕ ಬೋರ್ಡ್ ಸ್ಕೂಲ್, ಸ್ಲಂ ಏರಿಯಾಗಳಿಗೆ ತೆರಳಿ ಮಹಿಳೆಯರಿಗೆ ಹಂಚುತ್ತಾರೆ. ಇವರ ಈ ಕಾರ್ಯ ಭಾರೀ ಮನ್ನಣೆಗೆ ಪಾತ್ರವಾಗಿದೆ.

## ಸಾಲುದ್ದದ ಸುದ್ದಿಗಳು

## ತಾಜ್ ಮಹಲ್ ಹಿಂದೂ ಸ್ಮಾರಕ: ನ್ಯೂಯಾರ್ಕ್ ವಾಸ್ತುಶಿಲ್ಪಿ ಪ್ರೊ. ಮಾರ್ವಿನ್ ಮಿಲ್ಸ್ ವಾದ



ಜಗತ್ತಿನ 7 ಅದ್ಭುತಗಳಲ್ಲಿ ಒಂದಾದ ತಾಜ್ ಮಹಲ್ ಬಗ್ಗೆ ಹಲವಾರು ವಾದ–ವಿವಾದಗಳಿವೆ. ಶಹಜಹಾನ್ ತನ್ನ ಪತ್ನಿ ಮುಮ್ತಾಜ್ ನೆನಪಿಗಾಗಿ ಕಟ್ಟಿದ ಪ್ರೇಮ ಸೌಧ ಇದೆಂದು ಅಧಿಕೃತವಾಗಿ ನಂಬಲಾದರೂ, ಇದರ ಹಿಂದೆ ಬೇರೆಯದ್ದೇ ಇತಿಹಾಸ ಇದೆ ಎಂಬುದು ಹಲವರ ವಾದವಾಗಿದೆ. ನ್ಯೂಯಾರ್ಕ್ ಪ್ರಸಿದ್ಧ ವಾಸ್ತುಶಿಲ್ಪಿ ಪ್ರೊಫೆಸರ್ ಮಾರ್ವಿನ್ ಎಚ್. ಮಿಲ್ಸ್ ಅವರು ಕೂಡ, ತಾಜ್ ಮಹಲ್ ನಿಜವಾಗಿ ಹಿಂದೂ ಸ್ಮಾರಕವಾಗಿದೆ. ಅದನ್ನು ಮೊಘಲರು ಆಕ್ರಮಿಸಿಕೊಂಡು ಬಳಿಕ ಇಸ್ಲಾಂ ಸಮಾಧಿಯಾಗಿನ್ನಾಗಿ ಪರಿವರ್ತಿಸಿದ್ದಾರೆ ಎಂದು ನ್ಯೂಯಾರ್ಕ್ ಟೈಮ್ಸ್‌ಗೆ ಬರೆದ ಪತ್ರದಲ್ಲಿ ಪ್ರತಿಪಾದಿಸಿದ್ದಾರೆ. 'ಕಾರ್ಬನ್–14ನ ಸೈಂಟಿಫಿಕ್ ಡೇಟಿಂಗ್ ಮತ್ತು ಥರ್ಮೊಲುಮೈನ್‌ಸೆನ್ಸ್ ಮೂಲಕ ತಾಜ್‌ನ ಮೂಲವನ್ನು ನಿರ್ಧರಿಸಬಹುದು, ಭಾರತೀಯ ಪುರಾತತ್ವ ಇಲಾಖೆ ಈ ನಿಟ್ಟಿನಲ್ಲಿ ಕಾರ್ಯಪ್ರವೃತ್ತವಾಗಬೇಕು' ಎಂದು ಅವರು ಮನವಿ ಮಾಡಿದ್ದಾರೆ.

## ಕಾಶ್ಮೀರಿ ಬಾಲಕಿಯ ಸಂಪೂರ್ಣ ಹಣಕಾಸು ವೆಚ್ಚ ಭರಿಸುತ್ತಿದ್ದಾರೆ ಕಾರ್ಗಿಲ್ ಯುದ್ಧ ವೀರನ ತಂದೆ



ಪಾಕಿಸ್ಥಾನ ವಿರುದ್ಧದ 1999 ಕಾರ್ಗಿಲ್ ಯುದ್ಧದಲ್ಲಿ ಅಪ್ರತಿಮ ಸಾಹಸವನ್ನು ತೋರಿಸಿ ವೀರ ಮರಣವನ್ನಪ್ಪಿದ ಕ್ಯಾಪ್ಟನ್ ವಿಜಯಂತ್ ಥಾಪರ್ ಅವರ ಕೊನೆಯ ಆಸೆಯನ್ನು ಪೂರೈಸುವ ಕಾರ್ಯವನ್ನು ಅವರ ತಂದೆ ಇಂದಿಗೂ ಮುಂದುವರೆಸಿದ್ದಾರೆ. ಕಾಶ್ಮೀರದಲ್ಲಿ ಉಗ್ರರಿಂದ ಹತ್ಯೆಯಾಗಲ್ಪಟ್ಟ ವ್ಯಕ್ತಿಯೊಬ್ಬರ ಪುಟ್ಟ ಹೆಣ್ಣು ಮಗುವಿಗೆ ಉತ್ತಮ ಭವಿಷ್ಯ ಕಲ್ಪಿಸಿಕೊಡುವ ನಿರ್ಧಾರ ಮಾಡಿದ್ದರು ಥಾಪರ್. ಇವರು ನಿಯೋಜನೆಗೊಂಡಿದ್ದ ಆರ್ಮಿ ಪೋಸ್ಟ್ ಸಮೀಪವೇ ರುಕ್ಸಾನಳ ಮನೆಯಿತ್ತು. ಮಗುವಿನೊಂದಿಗೆ ಆತ್ಮೀಯ ಒಡನಾಟ, ಅಕ್ಕರೆಯನ್ನು ಬೆಳೆಸಿಕೊಂಡಿದ್ದರು. ಥಾಪರ್ ತೀರಿಕೊಂಡಾಗ ಆಕೆಗೆ 6 ವರ್ಷ ವಯಸ್ಸಾಗಿತ್ತು. ತಮ್ಮ ತಂದೆ ಕೊಲೊನಿಯಲ್ ವಿಎನ್ ಥಾಪರ್ ಅವರಿಗೆ ಬರೆದಿದ್ದ ಕೊನೆಯ ಪತ್ರದಲ್ಲೂ ರುಕ್ಸಾನ ಬಗ್ಗೆ ವಿಜ್ಯಾಂತ್ ಉಲ್ಲೇಖ ಮಾಡಿದ್ದರು, ಆ ಮಗುವಿಗೆ ಉತ್ತಮ ವಿದ್ಯೆ, ಭವಿಷ್ಯ ನೀಡಬೇಕೆಂಬ ತಮ್ಮ ಆಶಯವನ್ನು ಅದರಲ್ಲಿ ವ್ಯಕ್ತಪಡಿಸಿದ್ದರು. ಮಗನ ಆಸೆಯಂತೆ ಆತ ಹುತಾತ್ಮನಾದ ಬಳಿಕವೂ ರುಕ್ಸಾನಳ ಶಿಕ್ಷಣದ ವೆಚ್ಚವನ್ನು ಭರಿಸುತ್ತಿದ್ದಾರೆ ವಿಎನ್ ಥಾಪರ್. ಈಗ ಆಕೆಗೆ 19 ವರ್ಷ. 12ನೇ ತರಗತಿಯನ್ನು ಪೂರೈಸಿ ಮುಂದಿನ ಶಿಕ್ಷಣಕ್ಕೆ ಸಿದ್ಧಳಾಗಿದ್ದಾಳೆ. ಆಕೆಯ ಕುಟುಂಬ ನೊಯ್ಡಾಗೆ ಬಂದು ಥಾಪರ್ ಕುಟುಂಬವನ್ನು ಅನೇಕ ಬಾರಿ ಭೇಟಿಯಾಗಿದೆ. ಆಕೆಯ ಜೀವನದ ಸಂಪೂರ್ಣ ವೆಚ್ಚವನ್ನು ಇವರೇ ಭರಿಸುತ್ತಿದ್ದಾರೆ.

## ನಕ್ಸಲ್ ಪೀಡಿತ ಛತ್ತೀಸ್‌ಗಢ ಜಿಲ್ಲೆಯಲ್ಲಿ ಗ್ರಾಮಸ್ಥರು, ಪೊಲೀಸರಿಂದ ರಸ್ತೆ ನಿರ್ಮಾಣ

ಛತ್ತೀಸ್‌ಗಢದ ನಕ್ಸಲ್ ಪೀಡಿತ ಕನ್ಕೇರ್ ಜಿಲ್ಲೆ ಮತ್ತೊಮ್ಮೆ ಸುದ್ದಿ ಮಾಡಿದೆ. ಆದರೆ ಈ ಬಾರಿ ನಕ್ಸಲ್ ಹಿಂಸೆಗಾಗಿಯಲ್ಲ, ಒಂದು ಉತ್ತಮ ಕಾರ್ಯಕ್ಕಾಗಿ ಅದು ಸುದ್ದಿಯಾಗಿದೆ. ಪೊಲೀಸರು, ಗ್ರಾಮಸ್ಥರು ಸೇರಿ ಈ ಜಿಲ್ಲೆಯ ನಕ್ಸಲ್ ಬಾಧಿತ ಜಿವ್ಲಮರಿ ಮತ್ತು ಮರಪಿ ಪ್ರದೇಶದಲ್ಲಿ ರಸ್ತೆ ನಿರ್ಮಾಣ ಮಾಡುತ್ತಿದ್ದಾರೆ. ಇದು ದಟ್ಟ ಅರಣ್ಯ ಭಾಗವಾಗಿದ್ದು ಬಂಡೆಕಲ್ಲು ಮತ್ತು ಕಡಿದಾದ ಭೂಪ್ರದೇಶವನ್ನು ಸಮತಟ್ಟು ಮಾಡಿ ರಸ್ತೆ ನಿರ್ಮಾಣ ಮಾಡಲಾಗುತ್ತಿದೆ. ಇಲ್ಲಿ ನಕ್ಸಲರ ಉಪಟಳ ಹೆಚ್ಚಾಗಿರುವುದರಿಂದ ಭದ್ರತಾ ಪಡೆಗಳ ಕಮಾಂಡೋಗಳನ್ನು ನಿಯೋಜಿಸಿ, ಅವರ ಕಣ್ಗಾವಲಿನಡಿ ಕಾರ್ಯವನ್ನು ನಡೆಸಲಾಗುತ್ತಿದೆ. ಇಲ್ಲಿ ರಸ್ತೆ ಇಲ್ಲದ ಕಾರಣದಿಂದ ಗ್ರಾಮಸ್ಥರು ಮಾರುಕಟ್ಟೆ, ಆಸ್ಪತ್ರೆ ಇತ್ಯಾದಿ ಸೌಲಭ್ಯಗಳಿಂದ ವಂಚಿತಗೊಂಡಿದ್ದರು, ಹೀಗಾಗಿ ಜಿಲ್ಲಾಡಳಿತ ಅಲ್ಲಿ ರಸ್ತೆ ನಿರ್ಮಾಣಕ್ಕೆ ಮುಂದಾಯಿತು. ಅಲ್ಲಿನ ಜನರು ಇದಕ್ಕೆ ಬೆಂಬಲ ನೀಡಿ ಸ್ವತಃ ಕಾಮಗಾರಿಯಲ್ಲಿ ತೊಡಗಿಕೊಂಡಿದ್ದಾರೆ. ಭದ್ರತಾ ಪಡೆಗಳು ಇವರಿಗೆ ರಕ್ಷಣೆ ನೀಡುತ್ತಿವೆ.

## ರಾಮಾಯಣದ ಪ್ರಮುಖ ಸ್ಥಳಗಳನ್ನು ಸುತ್ತಲು ಬರುತ್ತಿದೆ 'ಶ್ರೀರಾಮಾಯಣ ಎಕ್ಸ್‌ಪ್ರೆಸ್'



ಭಾರತದ ಮಹಾಕಾವ್ಯ ರಾಮಾಯಣದಲ್ಲಿ ಉಲ್ಲೇಖಿಸಲಾಗಿರುವ ಪ್ರಮುಖ ಸ್ಥಳಗಳಿಗೆ ಒಂದು ಬಾರಿ ಭೇಟಿ ನೀಡಬೇಕು ಎಂಬ ಮಹದಾಸೆ ಹೊಂದಿರುವವರಿಗೆ ಭಾರತೀಯ ರೈಲ್ವೇ ಸುವರ್ಣಾವಕಾಶವನ್ನು ಒದಗಿಸಿದೆ. ರಾಮಾಯಣದ ಪ್ರಸಿದ್ಧ ಸ್ಥಳಗಳ ದರ್ಶನಕ್ಕೆಂದೇ ವಿಶೇಷ 'ಶ್ರೀರಾಮಾಯಣ ಎಕ್ಸ್‌ಪ್ರೆಸ್' ರೈಲಿನ ಮೂಲಕ ಪ್ರವಾಸ ಹಮ್ಮಿಕೊಂಡಿದೆ. ಇದೇ ನವೆಂಬರ್‌ನಲ್ಲಿ ನವದೆಹಲಿಯಲ್ಲಿ ಪ್ರಯಾಣ ಆರಂಭಿಸಲಿರುವ ಈ ಎಕ್ಸ್‌ಪ್ರೆಸ್ ಅಯೋಧ್ಯಾದಿಂದ ರಾಮೇಶ್ವರಂವರೆಗೆ ಪ್ರಯಾಣಿಸಲಿದೆ. ಅಲ್ಲಿಂದ ಪ್ರವಾಸವನ್ನು ಮುಂದುವರೆಸಲು ಇಚ್ಛಿಸುವವರನ್ನು ಶ್ರೀಲಂಕಾಗೂ ಕರೆದುಕೊಂಡು ಹೋಗಲಾಗುತ್ತದೆ. ಆದರೆ ಇವರು ರಾಮೇಶ್ವರಂನಿಂದ ಕೊಲೊಂಬೋಗೆ ವಿಮಾನದಲ್ಲಿ ತೆರಳಬೇಕು. ರಾಮಾಯಣ ಎಕ್ಸ್‌ಪ್ರೆಸ್ 16 ದಿನಗಳಲ್ಲಿ ಅಯೋಧ್ಯಾದಿಂದ ರಾಮೇಶ್ವರಂವರೆಗಿನ ರಾಮಾಯಣದ ಪ್ರಮುಖ ಸ್ಥಳಗಳ ದರ್ಶನ ಮಾಡಿಸಲಿದೆ. ನಂದಿಗ್ರಾಮ, ಸೀತಾಪುಡಿ, ಜನಕಪುರ, ವಾರಣಾಸಿ, ಪ್ರಯಾಗ್, ಚಿತ್ರಕೂಟ, ನಾಸಿಕ, ಹಂಪಿ ಮುಂತಾದ ಸ್ಥಳಗಳನ್ನು ದರ್ಶನ ಮಾಡಬಹುದಾಗಿದೆ.

Date of Publication 25, July 2018

पुंगवा PUNGAVA

# 74, Ranga Rao Road, Shankarapuram,
Bangalore - 560 004. Ph: 70196 55632
email: editor.pungava@gmail.com
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00

REGISTERED NEWS PAPER RNI 36528/79 LICENCED TO POST
WITHOUT PREPAYMENT-WPP46 AT BENGALURU PSO, BG-560 026
ON 10TH AND 25TH OF EVERY MONTH REG.NO.CPMG/KA/BGS/102/2018-20

FORTNIGHTLY 01-08-2018



# ಗೋಶಾಲೆಯ ಆವರಣದಲ್ಲಿ ವೃಂದಾವನ ಅರಣ್ಯ ನಿರ್ಮಾಣ

## ರಾಷ್ಟ್ರೋತ್ಥಾನ ಪರಿಷತ್‌ನ ಶ್ಲಾಘನೀಯ ಕಾರ್ಯ

ದೊಡ್ಡಬಳ್ಳಾಪುರದ ಘಾಟಿ ಸುಬ್ರಹ್ಮಣ್ಯ ದೇವಸ್ಥಾನದ ಸಮೀಪದಲ್ಲಿರುವ ರಾಷ್ಟ್ರೋತ್ಥಾನ ಗೋಶಾಲೆ ಪರಿಸರದ ಜಮೀನಿನಲ್ಲಿ ದಟ್ಟ ಅರಣ್ಯ ನಿರ್ಮಿಸುವ ಕಾರ್ಯಕ್ಕೆ ಚಾಲನೆ ದೊರೆತಿದೆ. ಈ ಕಾಡಿಗೆ 'ಬೃಂದಾವನ' ಎಂದು ನಾಮಕರಣ ಮಾಡಲಾಗಿದೆ. ಮಹಾವನ, ಶ್ರೀವನ, ತಪೋವನ, ಚರಕವನ– ಈ ನಾಲ್ಕು ವಿಶಿಷ್ಟ ಪರಿಕಲ್ಪನೆಗಳಲ್ಲಿ ಕಾನನ ನಿರ್ಮಾಣವಾಗಲಿದೆ. ರಾಷ್ಟ್ರೋತ್ಥಾನ ಗೋಶಾಲೆಯ 110 ಎಕರೆ ವಿಸ್ತೀರ್ಣದ ಜಮೀನಿನಲ್ಲಿ ಮೊದಲ ಹಂತವಾಗಿ 5 ಎಕರೆ ಪ್ರದೇಶದಲ್ಲಿ 1,500 ಗಿಡಗಳನ್ನು ನೆಡಲಾಗುತ್ತದೆ. ಬೇವು, ಆಲ, ಹಲಸು, ಹೆಬ್ಬೇವು, ಅರಳಿ, ತೊರೆಮತ್ತಿ, ತೇಗ ಸೇರಿದಂತೆ ಫಲ ನೀಡುವ ಮತ್ತು ನೆರಳು ಕೊಡುವ ಮರದ ಸಸಿ ನೆಡಲಾಗಿದೆ.



ನಿರಂತರ ಮರ ಕಡಿಯುವ ಮೂಲಕ ಭೂ ದೇವಿಯ ಗರ್ಭಪಾತ ಮಾಡುತ್ತಿರುವ ಮನುಷ್ಯನ ಕೃತ್ಯಕ್ಕೆ ಕಡಿವಾಣ ಬೀಳಬೇಕು.

ರಾಷ್ಟ್ರೋತ್ಥಾನ ಗೋಶಾಲೆ ವೃಂದಾವನ ಅರಣ್ಯ ಯೋಜನೆ ಮೂಲಕ ವನದುರ್ಗಿಗೆ ಜೀವಕಳೆ ತುಂಬುತ್ತಿದೆ. 1500 ವಿವಿಧ ಗಿಡಗಳನ್ನು ನಡೆವ ಮೂಲಕ ಆಕೆಗೆ ರೇಷ್ಮೆ ಸೀರೆ ತೊಡಿಸಲಾಗುತ್ತದೆ.

ಗೋಮೂತ್ರದಲ್ಲಿ 700 ಜಾತಿಯ ಸೂಕ್ಷ್ಮ ಕಣಗಳಿವೆ ಇವು ಭೂಮಿಗೆ ಸೇರಿದರೆ ಫಲವತ್ತತೆ ಹೆಚ್ಚಾಗುತ್ತದೆ. ಗಿಡ ನೆಟ್ಟು ಗೋವಿನ ಸಗಣಿ ಹಾಗೂ ನೀರು ಹಾಕಿ ಚೆನ್ನಾಗಿ ಬೆಳೆಸಿದರೆ ಭೂದೇವಿಗೆ ಮದುವೆ ಮಾಡಿಸಿದಷ್ಟು ಪುಣ್ಯ ಬರುತ್ತದೆ

– ಡಾ.ಯಲ್ಲಪ್ಪ ರೆಡ್ಡಿ, ಪರಿಸರ ತಜ್ಞ

'ಮಹಾವನ'ದಡಿ ಅರಳಿ, ಆಲ, ಹತ್ತಿ, ಮಹಾಗನಿ, ಹಲಸು, ಬೇವು, ಅಶೋಕ, ಅರ್ಜುನ, ತ್ರಿಫಲ, ಅಶ್ವತ್ಥ, ರುದ್ರಾಕ್ಷ, ನಾಗಲಿಂಗ, ಸಂಪಿಗೆ, ಕಾಡಸಂಪಿಗೆ, ಮಾವು ಅಲ್ಲದೆ ಬಿಲ್ವದ 9 ಪ್ರಕಾರದ ಗಿಡಗಳನ್ನು ಬೆಳೆಸಲಾಗುತ್ತದೆ. ಮಹಾವನದಲ್ಲಿ ಮನುಷ್ಯರ ಹಸ್ತಕ್ಷೇಪಕ್ಕೆ ಅವಕಾಶ ಇರುವುದಿಲ್ಲ. ಪ್ರಾಣಿಗಳು ನಿರ್ಭಯ ವಾತಾವರಣದಲ್ಲಿ ಸಂಚರಿಸಬೇಕೆಂದು ಗೋವುಗಳಿಗೆ, ಇತರೆ ಪ್ರಾಣಿಗಳಿಗೆ ಮಾತ್ರ ಪ್ರವೇಶ. ಶ್ರೀವನದಲ್ಲಿ ಪಕ್ಷಿಗಳನ್ನು ಆಕರ್ಷಿಸುವ ಹಣ್ಣುಗಳ ಗಿಡ ಬೆಳೆಸಲು ಆದ್ಯತೆ. ಈ ಮೂಲಕ ಪಕ್ಷಿ ಸಂಕುಲ ಹೆಚ್ಚಿಸುವುದು, ಬೀಜೋತ್ಪಾದನೆಗೆ ಆದ್ಯತೆ ನೀಡುವುದು ಗುರಿ. ತಪೋವನದಲ್ಲಿ ಪಂಚವಟಿ, ನಕ್ಷತ್ರ ವನ, ರಾಶಿ ವನ, ನವಗ್ರಹ ವನ ನಿರ್ಮಿಸಲಾಗುತ್ತದೆ. ಮನುಷ್ಯನ ಒತ್ತಡ, ತಲ್ಲಣ ಕಳೆಯುವಂಥ, ದಿವ್ಯಾನುಭೂತಿ ಒದಗಿಸಿ ನಿಸರ್ಗದೊಂದಿಗೆ ತಾದ್ಯಾತ್ಮ ಸಾಧಿಸುವ ಉದ್ದೇಶ ತಪೋವನದ್ದು. ಚರಕವನದಲ್ಲಿ ಔಷಧೀಯ ಗುಣಗಳಿರುವ, ಆಯುರ್ವೇದದಲ್ಲಿ ಮಹತ್ವ ಪಡೆದಿರುವ ಗಿಡಗಳ ನೆಟ್ಟು ಔಷಧ ತಯಾರಿಕೆಗೆ ಬಳಸುವ ಉದ್ದೇಶವಿದೆ.

ಈ ಕಾಡು ಬೆಳೆಸಲು ಹನಿ ನೀರಾವರಿ ವ್ಯವಸ್ಥೆ ಕಲ್ಪಿಸಲಾಗಿದೆ. ಸೋಲಾರ್ ಮತ್ತು ಬಯೋಗ್ಯಾಸ್ ಮೂಲಕ ನಡೆಯುವ ಪಂಪ್‌ಸೆಟ್‌ನಿಂದ ನೀರುಣಿಸಲಾಗುತ್ತದೆ. ಮಳೆನೀರನ್ನು ಹಿಡಿದಿಡಲು ಕೆರೆಯೊಂದನ್ನು ನಿರ್ಮಿಸಲಾಗುತ್ತಿದೆ.

ನಿಸರ್ಗದ ಶಕ್ತಿಯನ್ನು ಹೆಚ್ಚಿಸುವ, ವಾತಾವರಣ ಆಹ್ಲಾದಗೊಳಿಸುವಂಥ ಮರಗಳನ್ನೇ ಬೆಳೆಸಲು ಆದ್ಯತೆ ನೀಡಲಾಗಿದ್ದು, ಖ್ಯಾತ ಪರಿಸರ ತಜ್ಞ ಯಲ್ಲಪ್ಪ ರೆಡ್ಡಿ ಅವರು ಮರಗಳ ಆಯ್ಕೆ, ನೆಡುವ ವೈಜ್ಞಾನಿಕ ವಿಧಾನ, ಗೊಬ್ಬರ–ನೀರು ಉಣಿಸುವ ಪ್ರಕ್ರಿಯೆ, ಮಳೆನೀರನ್ನು ಹಿಡಿದಿಡುವ ಕ್ರಮ, ಮರಗಳ ಪೋಷಣೆ ಬಗ್ಗೆ ಮಾರ್ಗದರ್ಶನ ಮಾಡುತ್ತಿದ್ದಾರೆ.



ಶಿಕ್ಷಣ, ಆರೋಗ್ಯ, ಸಾಹಿತ್ಯ, ಪ್ರಕಾಶನ, ಗೋಸೇವೆ ಸೇರಿ ಹಲವು ಕ್ಷೇತ್ರಗಳಲ್ಲಿ ನಿರಂತರ ಸಮಾಜ ಸೇವೆಯಲ್ಲಿ ತೊಡಗಿರುವ ರಾಷ್ಟ್ರೋತ್ಥಾನ ಪರಿಷತ್ ಈಗ ಅರಣ್ಯ ನಿರ್ಮಿಸುವ ವಿನೂತನ ಯೋಜನೆಯ ಮೂಲಕ ಪರಿಸರ ಸಂರಕ್ಷಣೆಗೂ ಮುಂದಾಗಿದೆ.

ರಾಷ್ಟ್ರೋತ್ಥಾನ ಗೋಶಾಲೆಯಲ್ಲಿ 10 ದೇಸಿ ತಳಿಯ 500ಕ್ಕೂ ಅಧಿಕ ಗೋವುಗಳನ್ನು ಸಂರಕ್ಷಣೆ ಮಾಡಲಾಗುತ್ತಿದ್ದು ಗೋಸಂವರ್ಧನೆ ಮತ್ತು ಸಂಶೋಧನೆಯ ಕಾರ್ಯದಲ್ಲೂ ಮಹತ್ತರ ಸಾಧನೆ ಮಾಡಿದೆ. ■

# ಮೂರು ಹೊಸ ಗ್ಯಾಲೆಕ್ಸಿಗಳನ್ನು ಪತ್ತೆಹಚ್ಚಿದ ಇಸ್ರೋ



ಆಸ್ಟ್ರೋಸ್ಯಾಟ್ – ಇಸ್ರೋ ನಿರ್ಮಿತ ಬಾಹ್ಯಾಕಾಶ ವಿಕ್ಷಣಾ ಉಪಗ್ರಹವು ಭೂಮಿಯಿಂದ 800 ದಶಲಕ್ಷ ಜ್ಯೋತಿರ್ವರ್ಷಗಳಷ್ಟು ದೂರದಲ್ಲಿರುವ ಗ್ಯಾಲೆಕ್ಸಿಗಳನ್ನು ಪತ್ತೆ ಮಾಡಿದೆ. ಈ ನೂತನ ನಕ್ಷತ್ರ ಪುಂಜಗಳಿಗೆ ಅಬೆಲ್ 2256 ಎಂದು ನಾಮಕರಣ ಮಾಡಲಾಗಿದ್ದು ಮೂರೂ ಗ್ಯಾಲೆಕ್ಸಿಗಳು ಸಮೀಪದಲ್ಲಿ ಒಂದಕ್ಕೊಂದು ಹೊಂದಿಕೊಳ್ಳುವಂತೆ ಕಂಡುಬಂದಿದೆ. ಹೀಗೆ ಇರುವ ಮೂರೂ ಗ್ಯಾಲೆಕ್ಸಿಗಳು ಭವಿಷ್ಯದಲ್ಲಿ ಒಂದಾಗಿ ಬೃಹತ್ ಗಾತ್ರದ ಒಂದೇ ನಕ್ಷತ್ರ ಪುಂಜವಾಗುವ ಸಾಧ್ಯತೆ ಇದೆ ಎಂದು ಇಸ್ರೋ ವಿಜ್ಞಾನಿಗಳು ಅಭಿಪ್ರಾಯಪಟ್ಟಿದ್ದಾರೆ.

ಗ್ಯಾಲೆಕ್ಸಿಗಳ ನೇರಳಾತೀತ ಚಿತ್ರಗಳನ್ನು ಬಿಡುಗಡೆಗೊಳಿಸಿರುವ ಇಸ್ರೋ ಸದ್ಯ ಈ ನೂತನ ಗ್ಯಾಲೆಕ್ಸಿಗಳ ವಿಶೇಷ ಅಧ್ಯಯನದಲ್ಲಿ ತೊಡಗಿದೆ. ಇಸ್ರೋ ವಿಜ್ಞಾನಿಗಳು ಅಲ್ಟ್ರಾ ವೈಲೆಟ್ ಇಮೇಜಿಂಗ್ ಟೆಲಿಸ್ಕೋಪ್ ಮುಖೇನ ನಕ್ಷತ್ರ ಪುಂಜದ ಕುರಿತು ಅದ್ಯಯನ ನಡೆಸುತ್ತಿದ್ದಾರೆ.

ಈ ಮೂರೂ ನಕ್ಷತ್ರಪುಂಜಗಳು ಒಂದು ಭಾಗ ಮಾತ್ರವೇ ಕೂಡಿಕೊಂಡಿರುವಂತೆ ಕಂಡು ಬಂದಿದೆ. ಅಲ್ಲದೆ ಈ ಮೂರು ನಕ್ಷತ್ರ ಪುಂಜಗಳು ತಮ್ಮಲ್ಲಿ ಅನೇಕ ಚಿಕ್ಕ ಚಿಕ್ಕ ನಕ್ಷತ್ರ ಪುಂಜಗಳನ್ನು ಹೊಂದಿದೆ ಎನ್ನುವುದು ಸಹ ತಿಳಿದು ಬಂದಿದ್ದು ಈ ಕುರಿತಂತೆ ವಿಜ್ಞಾನಿಗಳು ಇನ್ನೂ ಹೆಚ್ಚಿನ ಸಂಶೋಧನೆಯಲ್ಲಿ ತೊಡಗಿಸಿಕೊಂಡಿದ್ದಾರೆ.

ಅಹಮದಾಬಾದ್‌ನ ಭೌತಶಾಸ್ತ್ರ ಸಂಶೋಧನಾ ಪ್ರಯೋಗಾಲಯದ ವಿಜ್ಞಾನಿಗಳು, ಇಂಜಿನಿಯರ್‌ಗಳ ತಂಡವು ಶನಿ ಗ್ರಹಕ್ಕಿಂತ ಚಿಕ್ಕದಾದ ಆದರೆ ನೆಪ್ಚೂನ್‌ಗಿಂತ ದೊಡ್ಡದಿರುವ ಗ್ರಹವೊಂದು ನಮ್ಮ ಸೌರಮಂಡಲದಾಚೆ ಸೂರ್ಯನಂತಹಾ ನಕ್ಷತ್ರವೊಂದರ ಸುತ್ತ ಸುತ್ತುತ್ತಿರುವುದನ್ನು ಪತ್ತೆ ಮಾಡಿದ್ದು ಇತ್ತೀಚೆಗೆ ವರದಿಯಾಗಿತ್ತು. ಬಾಹ್ಯಾಕಾಶ ಸಂಶೋಧನೆಯಲ್ಲಿ ತೊಡಗಿಕೊಂಡಿರುವ ಕೆಲವೇ ದೇಶಗಳ ಪಟ್ಟಿಯಲ್ಲ ಭಾರತವೂ ಸೇರಿದ್ದು ಹೆಮ್ಮೆಯ ವಿಷಯ. ■

# ಶಿಷ್ಟಾಚಾರ ಬದಿಗೊತ್ತಿ ಗಾಯಾಳುಗಳ ಭೇಟಿಯಾದ ಪ್ರಧಾನಿ



ಪಶ್ಚಿಮ ಬಂಗಾಳದ ಮೆದಿನಪೋರದಲ್ಲಿ ಸೋಮವಾರ ನರೇಂದ್ರ ಮೋದಿಯವರು 'ಕಿಸಾನ್ ಕಲ್ಯಾಣ್ ಸಮಾವೇಶ'ವನ್ನು ಆಯೋಜಿಸಿದ್ದ ವೇಳೆ ಪೆಂಡಾಲ್ ಬಿದ್ದು 22 ಮಂದಿ ಗಾಯಗೊಂಡಿದ್ದಾರೆ. ಈ ಸಂದರ್ಭದಲ್ಲೂ ಶಿಷ್ಟಾಚಾರವನ್ನು ಬದಿಗೊತ್ತಿ ಗಾಯಾಳುಗಳ ಕ್ಷೇಮ ವಿಚಾರಿಸಲು ಆಸ್ಪತ್ರೆಗೆ ಭೇಟಿ ನೀಡುವ ಮೂಲಕ ಪ್ರಧಾನಿ ಎಲ್ಲರ ಮನ ಗೆದ್ದಿದ್ದಾರೆ.

ಆಸ್ಪತ್ರೆಯಲ್ಲಿ ಗಾಯಾಳು ಮಹಿಳೆಯೊಬ್ಬಳು ಮೋದಿಯವರಲ್ಲಿ ಆಟೋಗ್ರಾಫ್ ನೀಡುವಂತೆ ಕೇಳಿದ್ದಾಳೆ, ಆಕೆಯ ಮನವಿಯನ್ನು ಆಲಿಸಿ ಅವರು ವಿನಮ್ರತೆಯಿಂದ ಆಕೆಗೆ ಆಟೋಗ್ರಾಫ್ ನೀಡಿದ್ದಾರೆ. ಈ ವೀಡಿಯೋ ಇಂಟರ್ನೆಟ್‌ನಲ್ಲಿ ಭಾರೀ ಸದ್ದು ಮಾಡಿದೆ.

ಅಷ್ಟೇ ಅಲ್ಲದೇ ಪೆಂಡಾಲ್ ಕುಸಿತ ಸಂಭವಿಸಿದ ತಕ್ಷಣ ವಿಶೇಷ ಭದ್ರತಾ ಸಿಬ್ಬಂದಿ, ವೈದ್ಯರು ಸೇರಿದಂತೆ ತನ್ನ ವಿಶೇಷ ತಂಡವನ್ನು ಮೋದಿ ರಕ್ಷಣಾ ಕಾರ್ಯಕ್ಕೆ ಕಳಿಸಿ ಮಾನವೀಯತೆಯನ್ನು ಪ್ರದರ್ಶಿಸಿದ್ದಾರೆ.

ಕೇಂದ್ರ ಗೃಹಸಚಿವಾಲಯವು ಪೆಂಡಾಲ್ ಕುಸಿತದ ಬಗ್ಗೆ ಪಶ್ಚಿಮಬಂಗಾಳ ಸರ್ಕಾರದಿಂದ ವರದಿಯನ್ನು ಕೇಳಿದೆ. ಆದರೆ ಸರ್ಕಾರ ಘಟನೆಗೆ ಆಯೋಜಕರೇ ನೇರಹೊಣೆ ಎಂದು ಹೇಳಿ ಕೈತೊಳೆದುಕೊಂಡಿದೆ. ■

**ಓದುಗರೇ ಗಮನಿಸಿ**

ಪುಂಗವದ ಹೊಸ ಚಂದಾದಾರರಾಗಲು ಮತ್ತು ಚಂದಾ ನವೀಕರಣ ಮಾಡುವವರು ಕೆಳಗಿನ ವಿಳಾಸಕ್ಕೆ ಸಂಪರ್ಕಿಸಿ:
ಪುಂಗವ, #74, ರಂಗರಾವ್ ರಸ್ತೆ, ಶಂಕರಪುರಂ, ಬೆಂಗಳೂರು–560 004. ಮೊಬೈಲ್: 97391 83021

ಸಂಪಾದಕ–ಪ್ರಕಾಶಕ : ಕಾ.ಶ್ರೀ. ನಾಗರಾಜ, #74, ರಂಗರಾವ್ ರಸ್ತೆ, ಬೆಂಗಳೂರು–04. ಸಂಪಾದಕೀಯ : ಮೊ. 97312 64009 ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು–19.